ವರದಿ ಮಾಡಬಹುದಾಗಿದೆ

## ಭಾರತದ ಸರ್ವೋಚ್ಚ ನ್ಯಾಯಾಲಯ

## ಸಿವಿಲ್ ಅಪೀಲು ಅಧಿಕಾರವ್ಯಾಪ್ತಿ

## ಸಿವಿಲ್ ಅಪೀಲು ಸಂಖ್ಯೆ: 413/2023, ದಿನಾಂಕ: 17ನೇ ಫೆಬ್ರವರಿ 2023

**ರಾಷ್ಟ್ರೀಯ ತಾಂತ್ರಿಕ ಸಂಶೋಧನಾ ಸಂಸ್ಥೆ ಮತ್ತು ಇತರರು**

**ವಿರುದ್ಧ**

**ದೀಪ್ತಿ ದೇವಧಾರೆ**

## ತೀರ್ಪು

**ನ್ಯಾಯಮೂರ್ತಿ ಎಂ. ಆರ್. ಶಾಹ್**

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರಿಟ್ ಅರ್ಜಿ ಸಂಖ್ಯೆ: 10867/2021 ರಲ್ಲಿ ದಿನಾಂಕ 08.10.2021ರಂದು ಹೊರಡಿಸಿದ ಪ್ರಶ್ನಿತ ತೀರ್ಪು ಹಾಗೂ ಆದೇಶದಲ್ಲಿ ಉಚ್ಚ ನ್ಯಾಯಾಲಯವು ಇಲ್ಲಿನ ಪ್ರತಿವಾದಿಗಳು ಸಲ್ಲಿಸಿದ್ದ ಸದರಿ ರಿಟ್ ಅರ್ಜಿಯನ್ನು ಅಂಗೀಕರಿಸಿ, ಕೇಂದ್ರೀಯ ಆಡಳಿತ ನ್ಯಾಯಾಧಿಕರಣ, ಬೆಂಗಳೂರು ಪೀಠ, ಬೆಂಗಳೂರು (ಇಲ್ಲಿಂದ ಮುಂದೆ 'ನ್ಯಾಯಾಧಿಕರಣ' ಎಂದು ಉಲ್ಲೇಖಿಸಲಾಗಿದೆ) ದಿನಾಂಕ 31.05.2021ರಂದು ನೀಡಿದ ಆದೇಶವನ್ನು ರದ್ದುಗೊಳಿಸಿ, ಮೂಲ ಅರ್ಜಿ ಸಂಖ್ಯೆ: 170/1318/2019 ಇದನ್ನು ವಜಾಗೊಳಿಸಿ, ಅಪೀಲುದಾರ(ರು) ದಿನಾಂಕ 12.02.2019ರಂದು ಹೊರಡಿಸಿರುವ ಆದೇಶವನ್ನು ಕೇವಲ ಬಿಡುಗಡೆಯ ಆದೇಶವಾಗಿ ಓದತಕ್ಕದ್ದು ಮತ್ತು ಪ್ರತಿವಾದಿಯ ಸೇವಾಂತ್ಯ ಪ್ರಯೋಜನಗಳನ್ನು ಲೆಕ್ಕ ಹಾಕುವ ಸಂದರ್ಭದಲ್ಲಿ ಆಕೆಯು 'ಡಿಆರ್‌ಡಿಒ'ದಲ್ಲಿ ಸಲ್ಲಿಸಿರುವ ಈ ಹಿಂದಿನ

ಸೇವೆಯ ಪ್ರಯೋಜನವೂ ಸೇರಿದಂತೆ ಎಲ್ಲಾ ಆನುಷಂಗಿಕ ಪ್ರಯೋಜನಗಳಿಗೆ ಆಕೆಯು ಹಕ್ಕುಳ್ಳವಳಾಗಿರತಕ್ಕದ್ದು ಎಂದು ನಿರ್ದೇಶಿಸಿದ್ದು, ಇದರಿಂದ ಬಾಧಿತರಾಗಿ ಮತ್ತು ಅಸಮಾಧಾನಗೊಂಡು ರಾಷ್ಟ್ರೀಯ ತಾಂತ್ರಿಕ ಸಂಶೋಧನಾ ಸಂಸ್ಥೆ ಹಾಗೂ ಇತರರು ಪ್ರಸ್ತುತ ಅಪೀಲನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿ–ಮೂಲ ರಿಟ್ ಅರ್ಜಿದಾರಳು ವಿಜ್ಞಾನಿ 'ಎಚ್' ಹುದ್ದೆಯನ್ನು ಹೊಂದಿದ್ದು, ಆಕೆಗೆ ಆ ಹುದ್ದೆಯಲ್ಲಿ ಕೊನೆಯಲ್ಲಿ ಪಡೆದ ವೇತನವೇ ಆಕೆಯ ಎಲ್ಲಾ ಪ್ರಯೋಜನಗಳನ್ನು ಇತ್ಯರ್ಥಗೊಳಿಸುವ ಮಾನದಂಡವಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಆಕೆಗೆ ಅನುಮತಿಸಬಹುದಾಗಿರುವ ಅಂತಹ ಎಲ್ಲಾ ಪ್ರಯೋಜನಗಳಿಗೆ ಆಕೆಯು ಹಕ್ಕುಳ್ಳವಳಾಗಿರುತ್ತಾಳೆ ಎಂಬುದಾಗಿ ಉಚ್ಚ ನ್ಯಾಯಾಲಯವು ಮುಂದುವರಿದು ಸ್ಪಷ್ಟಪಡಿಸಿದೆ.

2. ಪ್ರಸ್ತುತ ಅಪೀಲಿಗೆ ಕಾರಣವಾಗುವ ಸಂಗತಿಗಳು ಸಂಕ್ಷಿಪ್ತವಾಗಿ ಈ ಕೆಳಗಿನಂತಿವೆ:

ಇಲ್ಲಿನ ಪ್ರತಿವಾದಿ–ಮೂಲ ರಿಟ್ ಅರ್ಜಿದಾರರು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ (ಇಲ್ಲಿಂದ ಮುಂದೆ 'ಡಿಆರ್‌ಡಿಒ' ಎಂದು ಉಲ್ಲೇಖಿಸಲಾಗಿದೆ) ದಿನಾಂಕ 12.09.1988ರಂದು ವಿಜ್ಞಾನಿ 'ಬಿ' ಹುದ್ದೆಯಲ್ಲಿ ಸೇವೆಗೆ ಸೇರಿರುತ್ತಾರೆ ಹಾಗೂ ಆಕೆಯು 'ಡಿಆರ್‌ಡಿಒ'ದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ನಿಯತಕಾಲಿಕ ಪದೋನ್ನತಿಗಳನ್ನು ಪಡೆದಿರುತ್ತಾರೆ. ದಿನಾಂಕ 1.7.2013ರಂದು ಆಕೆಯು ವಿಜ್ಞಾನಿ 'ಜಿ' ಹುದ್ದೆಗೆ ಪದೋನ್ನತಿ ಹೊಂದಿದ್ದು, ಬೆಂಗಳೂರಿನ 'ಡಿಆರ್‌ಡಿಒ'ದ ಸೆಂಟರ್ ಫಾರ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಆ್ಯಂಡ್ ರೋಬೋಟಿಕ್ಸ್‌ನಲ್ಲಿ (ಸಂಕ್ಷಿಪ್ತವಾಗಿ 'ಸಿಎಐಆರ್') ಸಿಸ್ಟಮ್ಸ್ ಆ್ಯಂಡ್ ರೋಬೋಟಿಕ್ಸ್ ವಿಭಾಗದ ಮುಖ್ಯಸ್ಥರಾಗಿದ್ದರು. ಜನವರಿ 2018ರಲ್ಲಿ 'ಎನ್‌ಟಿಆರ್‌ಒ' ಸಂಸ್ಥೆಯು ವೇತನ ಮಾದರಿಯ 15ನೇ ಹಂತದಲ್ಲಿ ವಿಜ್ಞಾನಿ 'ಎಚ್' ಸ್ಥಾನಕ್ಕೆ ಎರಡು ಹುದ್ದೆಗಳನ್ನು ಭರಿಸುವ ಕುರಿತು ನೇಮಕಾತಿಯ ಅಧಿಸೂಚನೆಯೊಂದನ್ನು ಹೊರಡಿಸಿತು. ಆರಂಭದಲ್ಲಿ ನೇಮಕಾತಿಯನ್ನು ಅಲ್ಪಾವಧಿ

ಗುತ್ತಿಗೆಯ ಆಧಾರವನ್ನೂ ಒಳಗೊಂಡಂತೆ ನಿಯೋಜನೆಯ ಆಧಾರದಲ್ಲಿ ಮಾಡಬೇಕು ಎಂದು ಈ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಅದಾಗ್ಯೂ, ತರುವಾಯದಲ್ಲಿ 2018ರ ಜನವರಿ ತಿಂಗಳಿನಲ್ಲಿ ನಿಯೋಜನೆ (ಅಲ್ಪಾವಧಿಯನ್ನು ಒಳಗೊಂಡಂತೆ)/ಲೀನಗೊಳಿಸುವಿಕೆಯ ಆಧಾರದ ಮೇಲೆ ಮತ್ತು ಅದು ತಪ್ಪಿದಲ್ಲಿ, ನೇರ ನೇಮಕಾತಿಯ ಆಧಾರದ ಮೇಲೆ ಈ ಹುದ್ದೆಗಳನ್ನು ಭರ್ತಿಗೊಳಿಸಲು ಸೂಚಿಸಿ ತಿದ್ದುಪಡಿಯನ್ನು ಪ್ರಕಟಿಸಲಾಯಿತು. 'ಸಿಎಐಆರ್', 'ಡಿಆರ್‌ಡಿಒ'ದಲ್ಲಿ ವೇತನ ಮಾದರಿಯ 14ನೇ ಹಂತದಲ್ಲಿ ವಿಜ್ಞಾನಿ 'ಜಿ' ಹುದ್ದೆಯನ್ನು ಹೊಂದಿದ್ದ ಮೂಲ ರಿಟ್ ಅರ್ಜಿದಾರರು ತಮ್ಮ ಮಾತೃ ಇಲಾಖೆಯಾಗಿದ್ದ 'ಡಿಆರ್‌ಡಿಒ'ದ ಮೂಲಕ 'ಎನ್‌ಟಿಆರ್‌ಒ'ದಲ್ಲಿ ವಿಜ್ಞಾನಿ 'ಎಚ್' ಹುದ್ದೆಗೆ ಅರ್ಜಿ ಸಲ್ಲಿಸಿದರು. ದಿನಾಂಕ 10.05.2018ರಂದು ವಿಜ್ಞಾನಿ 'ಎಚ್' ಆಗಿ 'ಎನ್‌ಟಿಆರ್‌ಒ'ದಲ್ಲಿ ಮಾಡಲಾಗಿದ್ದ ನೇಮಕಾತಿಗಾಗಿ ಸಲಹಾ ಪರಿಷತ್ತಿನ ನೇಮಕಾತಿಗಳ ಸಮಿತಿಯು ನೀಡಿದ ಅನುಮೋದನೆಗೆ ಆನುಷಂಗಿಕವಾಗಿ, ಒಂದು ವರ್ಷದ ಪರಿವೀಕ್ಷಣಾ ಅವಧಿಯನ್ನು ಒಳಗೊಂಡಂತೆ ನೇಮಕಾತಿಯ ದಾಖಲೆಯಲ್ಲಿ (ಆಫರ್) ಉಲ್ಲೇಖಿಸಿರುವ ಷರತ್ತುಗಳು ಹಾಗೂ ನಿಬಂಧನೆಗಳ ಆಧಾರದ ಮೇಲೆ ಮೂಲ ರಿಟ್ ಅರ್ಜಿದಾರರಿಗೆ ನೇಮಕಾತಿಯನ್ನು ನೀಡಲಾಯಿತು. ನೇರ ನೇಮಕಾತಿಯ ಆಧಾರದಲ್ಲಿ 'ಎನ್‌ಟಿಆರ್‌ಒ'ದಲ್ಲಿ ವಿಜ್ಞಾನಿ 'ಎಚ್' ಆಗಿ ಆಯ್ಕೆಯಾಗಿ ನೇಮಕಗೊಂಡ ಕಾರಣದಿಂದಾಗಿ, ಪ್ರತಿವಾದಿ–ಮೂಲ ರಿಟ್ ಅರ್ಜಿದಾರರು 'ಡಿಆರ್‌ಡಿಒ'ದ ವಿಜ್ಞಾನಿ 'ಜಿ' ಹುದ್ದೆಗೆ ತಮ್ಮ ತಾಂತ್ರಿಕ ರಾಜೀನಾಮೆಯನ್ನು ಸಲ್ಲಿಸಿದ್ದು, ಅದು ದಿನಾಂಕ 22.06.2018ರಂದು ಅಂಗೀಕೃತವಾಯಿತು ಹಾಗೂ 'ಡಿಆರ್‌ಡಿಒ' ಸಂಸ್ಥೆಯು ಆಕೆಯನ್ನು 'ಎನ್‌ಟಿಆರ್‌ಒ'ದಲ್ಲಿನ ಹೊಸ ನೇಮಕಾತಿಯನ್ನು ಸ್ವೀಕರಿಸಲು ಬಿಡುಗಡೆಗೊಳಿಸಿತು.

2.1 ಮೂಲ ರಿಟ್ ಅರ್ಜಿದಾರರು 'ಎನ್‌ಟಿಆರ್‌ಒ' ಸಂಸ್ಥೆಯನ್ನು ದಿನಾಂಕ 26.02.2018ರಂದು ನೇರ ನೇಮಕಾತಿಯ ಆಧಾರದ ಮೇಲೆ ಒಂದು ವರ್ಷದ ಪರಿವೀಕ್ಷಣಾ ಅವಧಿಯ ಮೇರೆಗೆ ವಿಜ್ಞಾನಿ 'ಎಚ್'

ಹುದ್ದೆಯಲ್ಲಿ ಸೇವೆಗೆ ಸೇರಿರುತ್ತಾರೆ. ಅದಾಗ್ಯೂ, ನಂತರ ಆಕೆಯು 'ಎನ್‌ಟಿಆರ್‌ಒ'ದಲ್ಲಿ ವಿಜ್ಞಾನಿ 'ಎಚ್' ಆಗಿ ಪರಿವೀಕ್ಷಣಾ ಅವಧಿಯಲ್ಲಿದ್ದಾಗ, ಎಸಿಸಿ ಸಮಿತಿಯು ದಿನಾಂಕ 12.02.2019ರ ಆದೇಶದಲ್ಲಿ 'ಎನ್‌ಟಿಆರ್‌ಒ'ದಲ್ಲಿನ ವಿಜ್ಞಾನಿ 'ಎಚ್' ಹುದ್ದೆಯಿಂದ (ಪರಿವೀಕ್ಷಣೆಯ ಮೇಲೆ) ಅವರ ಮಾತೃ ಇಲಾಖೆಯಾದ 'ಡಿಆರ್‌ಡಿಒ'ದ ಕೇಡರ್‌ಗೆ ಅವಧಿಪೂರ್ವ ವಾಪಸಾತಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಅನುಮೋದನೆ ನೀಡಿತು. ಅದಕ್ಕನುಸಾರವಾಗಿ, ಪ್ರತಿವಾದಿಯನ್ನು ತನ್ನ ಮೂಲ ಕೇಡರ್ ಆಗಿರುವ 'ಡಿಆರ್‌ಡಿಒ'ಗೆ ವರದಿ ಮಾಡಿಕೊಳ್ಳಲು ಸೂಚನೆಗಳನ್ನು ನೀಡಿ, ದಿನಾಂಕ 12.02.2019ರಂದು 'ಎನ್‌ಟಿಆರ್‌ಒ'ದಿಂದ ಬಿಡುಗಡೆ ಮಾಡಲಾಯಿತು. ಅದಕ್ಕನುಗುಣವಾಗಿ, ಆಕೆಯು ದಿನಾಂಕ 13.02.2019ರಂದು 'ಸಿಎಐಆರ್', 'ಡಿಆರ್‌ಡಿಒ'ದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡರು ಹಾಗೂ ಅದೇ ಸಮಯದಲ್ಲಿ ಆಕೆಯು 'ಎನ್‌ಟಿಆರ್‌ಒ'ದಿಂದ ವಾಪಸಾತಿಯ ಬಳಿಕ 'ಡಿಆರ್‌ಡಿಒ'ದಲ್ಲಿ ತಮ್ಮ ನೇಮಕಾತಿಯ ವಿಧ್ಯುಕ್ತ ಆದೇಶಗಳನ್ನು ನೀಡುವಂತೆ ಕೋರಿ 'ಡಿಆರ್‌ಡಿಒ'ದ ಅಧ್ಯಕ್ಷರಿಗೆ ಇನ್ನೊಂದು ಅರ್ಜಿ ಸಲ್ಲಿಸಿದರು. ಆಕೆ ತಮ್ಮನ್ನು 'ಡಿಆರ್‌ಡಿಒ'ದಲ್ಲಿ ವಿಜ್ಞಾನಿ 'ಎಚ್' ಶ್ರೇಣಿಯಲ್ಲಿ ತಮಗೆ ಹೊಂದುವ ಹುದ್ದೆಯಲ್ಲಿ ತಮ್ಮನ್ನು ನಿಯೋಜನೆಗೊಳಿಸುವಂತೆ ವಿಧ್ಯುಕ್ತ ಆದೇಶಗಳನ್ನು ಹೊರಡಿಸುವಂತೆಯೂ 'ಡಿಆರ್‌ಡಿಒ'ವನ್ನು ಕೋರಿರುತ್ತಾರೆ. ವಿಧ್ಯುಕ್ತ ಆದೇಶಗಳನ್ನು ನಿರೀಕ್ಷಿಸುತ್ತಾ, ಆಕೆಯು 'ಡಿಆರ್‌ಡಿಒ'ಗೆ ದಿನಾಂಕ 19.02.2019ರಂದು ಮೂರು ತಿಂಗಳ ಕಾಲ ರಜೆಗಾಗಿ ಕೋರಿಕೆ ಸಲ್ಲಿಸಿದರು. ದಿನಾಂಕ 10.03.2019ರ ಅನುಮೋದನೆಯ ಮೂಲಕ, 'ಎನ್‌ಟಿಆರ್‌ಒ'ದಿಂದ (ಪರಿವೀಕ್ಷಣೆಯ ಮೇಲೆ ವಿಜ್ಞಾನಿ 'ಎಚ್') ಆಕೆಗೆ ಅವಧಿಪೂರ್ವ ವಾಪಸಾತಿಯ ಕಾರಣದಿಂದಾಗಿ ಮೂಲ ಕೇಡರ್‌ನಲ್ಲಿ ವಿಜ್ಞಾನಿ 'ಜಿ' ಆಗಿ ದಿನಾಂಕ 13.02.2019ರಿಂದ ಜಾರಿಗೆ ಬರುವಂತೆ 'ಡಿಆರ್‌ಡಿಒ'ಗೆ ಸೇರಲು 'ಡಿಆರ್‌ಡಿಒ' ಕೇಂದ್ರ ಕಛೇರಿಯಿಂದ ನೀಡಲಾದ ಅನುಮೋದನೆಯ ಕುರಿತು 'ಎನ್‌ಟಿಆರ್‌ಒ' ತಿಳಿಸಿರುತ್ತದೆ. ತದನಂತರ ಮೂಲ ರಿಟ್ ಅರ್ಜಿದಾರರು ತಮ್ಮನ್ನು ಪುನರ್ ನೇಮಿಸುವಂತೆ ಮತ್ತು ತಮ್ಮ ದಿನಾಂಕ 19.03.2019ರ ಅರ್ಜಿಯನ್ನು

ದಿನಾಂಕ 13.02.2019ರಿಂದ ಆರಂಭಗೊಂಡಂತೆ ಮೂರು ತಿಂಗಳ ನೋಟಿಸ್ ಅವಧಿ ಎಂದು ಸ್ವಯಿಚ್ಛಾ ನಿವೃತ್ತಿಗಾಗಿ ಪರಿಗಣಿಸುವಂತೆ 'ಎನ್‌ಟಿಆರ್‌ಒ'ವನ್ನು ಕೋರಿದರು.

2.2 2019 ರ ಏಪ್ರಿಲ್ ತಿಂಗಳಲ್ಲಿ ಮೂಲ ರಿಟ್ ಅರ್ಜಿದಾರರನ್ನು 'ಡಿಆರ್‌ಡಿಒ'ದಲ್ಲಿ ವಿಜ್ಞಾನಿ 'ಜಿ' ಯಿಂದ 'ಎಚ್'ಗೆ ಪದೋನ್ನತಿಗೆ ಪರಿಗಣಿಸಲಾಯಿತು ಮತ್ತು ಪದೋನ್ನತಿಗಾಗಿ ಮೌಲ್ಯಮಾಪನದಲ್ಲಿ ಭಾಗವಹಿಸುವಂತೆ ಅವರಿಗೆ ತಿಳಿಸಲಾಯಿತು ಎಂದು ಕಂಡುಬಂದಿದೆ. ಮೂಲ ರಿಟ್ ಅರ್ಜಿದಾರರು ಆ ಪದೋನ್ನತಿಗಾಗಿ ತಮ್ಮ ವೈಯಕ್ತಿಕ ಮಾಹಿತಿಯನ್ನು ಸಲ್ಲಿಸಿದರು ಮತ್ತು ಮೌಲ್ಯಮಾಪನದಲ್ಲಿ ಭಾಗವಹಿಸಿದರು. ಆದರೆ ಆಕೆಯು 'ಅರ್ಹರಲ್ಲ' ಎಂದು ತಿಳಿದುಬಂದಿತು. ದಿನಾಂಕ 13.11.2019ರಂದು ತಿಳಿಸಿದಂತೆ, ಪ್ರತಿವಾದಿಗೆ ದಿನಾಂಕ 16.02.2019ರೊಳಗೆ 'ಸಿಎಐಆರ್', 'ಡಿಆರ್‌ಡಿಒ'ಗೆ ವರದಿ ಮಾಡಿಕೊಂಡು ಕರ್ತವ್ಯಕ್ಕೆ ಹಾಜರಾಗುವಂತೆ ನಿರ್ದೇಶಿಸಲಾಗಿದ್ದು, ಅದಕ್ಕೆ ತಪ್ಪಿದಲ್ಲಿ ಆಕೆಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು. ತದನಂತರ, ಇಲ್ಲಿನ ಪ್ರತಿವಾದಿ ಬೆಂಗಳೂರಿನ 'ಸಿಎಟಿ'ಯ ಮುಂದೆ 'ಎನ್‌ಟಿಆರ್‌ಒ' ದಿನಾಂಕ 12.2.2019ರಂದು (ಆಕೆಯನ್ನು 'ಡಿಆರ್‌ಡಿಒ'ಗೆ ವಾಪಸ್ಸು ಕಳುಹಿಸುವಂತೆ ಸೂಚಿಸಿ) ನೀಡಿದ ಆದೇಶವನ್ನು, 'ಡಿಆರ್‌ಡಿಒ' ದಿನಾಂಕ 13.11.2019ರಂದು (ಆಕೆಯನ್ನು ದಿನಾಂಕ 16.12.2019ರವರೆಗೆ 'ಸಿಎಐಆರ್' 'ಡಿಆರ್‌ಡಿಒ'ಗೆ ವರದಿ ಮಾಡಿಕೊಂಡು ಕರ್ತವ್ಯಕ್ಕೆ ಹಾಜರಾಗುವಂತೆ ನಿರ್ದೇಶಿಸಿ) ನೀಡಿದ ಆದೇಶವನ್ನು ಪ್ರಶ್ನಿಸಿ ಹಾಗೂ ದಿನಾಂಕ 19.03.2019ರ ತಮ್ಮ ಸ್ವಯಿಚ್ಛಾ ನಿವೃತ್ತಿ ಅರ್ಜಿಯನ್ನು ಸ್ವೀಕರಿಸುವ ಬಗ್ಗೆ ನಿರ್ದೇಶನ ಕೋರಿ, ಮೂಲ ಅರ್ಜಿಯನ್ನು ದಿನಾಂಕ 25.11.2019ರಂದು ಸಲ್ಲಿಸಿರುತ್ತಾರೆ. ನ್ಯಾಯಾಧಿಕರಣದ ಮುಂದೆ ಆಕೆಯು ತಮ್ಮನ್ನು ತಪ್ಪಾಗಿ ಅವಧಿಪೂರ್ವವಾಗಿ ವಾಪಸ್ ಕಳುಹಿಸಲಾಗಿದೆ ಮತ್ತು ವಿಜ್ಞಾನಿ 'ಜಿ' ಎಂದು 'ಡಿಆರ್‌ಡಿಒ'ಗೆ ಕಳುಹಿಸಲಾಗಿದೆ ಎಂಬುದು ಆಕೆಯ ಸರ್ವತ್ರ ವಾದವಾಗಿತ್ತು. ಆಕೆಯ ಸ್ವಯಿಚ್ಛಾ ನಿವೃತ್ತಿ ಅರ್ಜಿಯನ್ನು 'ಡಿಆರ್‌ಡಿಒ'ದಲ್ಲಿ

ವಿಜ್ಞಾನಿ 'ಎಚ್' ಸ್ಥಾನದಲ್ಲಿ ಪರಿಗಣಿಸಬೇಕಾಗಿತ್ತು ಎಂಬುದು ಪ್ರತಿವಾದಿ–ಮೂಲ ರಿಟ್ ಅರ್ಜಿದಾರರ ಪರ ನಿರ್ದಿಷ್ಟ ವಾದವಾಗಿತ್ತು.

2.3 ಈ ವಿಷಯವನ್ನು ಪರಿಗಣಿಸಿ, ಆಕೆಯ ಪರಿವೀಕ್ಷಣಾ ಅವಧಿಯಲ್ಲಿ ದಿನಾಂಕ 12.02.2019ರಂದು ನೀಡಿದ್ದ ಆದೇಶವು ಕೇವಲ ಬಿಡುಗಡೆ ಆದೇಶವಾಗಿತ್ತು ಮತ್ತು ಈ ಹಿಂದೆ ಆಕೆಯು 'ಡಿಆರ್‌ಡಿಒ'ಗೆ ತಾಂತ್ರಿಕ ರಾಜೀನಾಮೆಯನ್ನು ಸಲ್ಲಿಸಿದ್ದರಿಂದಾಗಿ ಮತ್ತು/ಅಥವಾ ತಾಂತ್ರಿಕ ರಾಜೀನಾಮೆಯನ್ನು ಸಲ್ಲಿಸಿದ ನಂತರ 'ಡಿಆರ್‌ಡಿಒ'ದಲ್ಲಿ ಹೊಂದಿದ್ದ ಧಾರಣಾಧಿಕಾರವನ್ನು ಮುಂದುವರೆಸಿದ್ದರಿಂದಾಗಿ ಆಕೆಯನ್ನು 'ಡಿಆರ್‌ಡಿಒ'ಗೆ ಸಮರ್ಪಕವಾಗಿಯೇ ವಾಪಸಾತಿಯ ಆಧಾರದ ಮೇಲೆ ಕಳುಹಿಸಲಾಯಿತು ಎಂದು ನ್ಯಾಯಾಧಿಕರಣವು ಗಮನಿಸಿ, ನಿರ್ಣಯಿಸಿತು. ಒಂದು ಬಾರಿ ಪ್ರತಿವಾದಿಯು ತಮ್ಮ ಮಾತೃ ಸಂಸ್ಥೆಗೆ ಮರು ವರದಿ ಮಾಡಿಕೊಂಡ ಬಳಿಕ ಹಾಗೂ ವಿಜ್ಞಾನಿ 'ಎಚ್' ಹುದ್ದೆಗೆ ಪದೋನ್ನತಿಯನ್ನು ಕೋರಿದ ಬಳಿಕ ಹಾಗೂ ಆಕೆಯು 'ಅನರ್ಹ'ರೆಂದು ತಿಳಿದು ಬಂದ ಬಳಿಕ, ತಾವು 'ಡಿಆರ್‌ಡಿಒ'ದಿಂದ ಸ್ವಯಿಚ್ಛಾ ನಿವೃತ್ತಿಯನ್ನು ವಿಜ್ಞಾನಿ 'ಎಚ್' ಹುದ್ದೆಯ ಮೇಲೆ ನಿವೃತ್ತಿಯನ್ನು ಹೊಂದಬೇಕು ಎಂದು ವಾದಿಸಲು ಆಕೆಗೆ ಅವಕಾಶವಿರುವುದಿಲ್ಲ ಎಂಬುದಾಗಿಯೂ ನ್ಯಾಯಾಧಿಕರಣವು ಗಮನಿಸಿ, ನಿರ್ಣಯಿಸಿದೆ. ಆನುಷಂಗಿಕವಾಗಿ, ಇಲ್ಲಿನ ಪ್ರತಿವಾದಿಯು ಸಲ್ಲಿಸಿದ ಮೂಲ ಅರ್ಜಿಯನ್ನು ನ್ಯಾಯಾಧಿಕರಣವು ವಜಾಗೊಳಿಸಿತು. ನ್ಯಾಯಾಧಿಕರಣವು ನೀಡಿದ್ದ ತೀರ್ಪು ಮತ್ತು ಆದೇಶವು ಪ್ರಸ್ತುತ ರಿಟ್ ಅರ್ಜಿಯ ಮೂಲಕ ಉಚ್ಚ ನ್ಯಾಯಾಲಯದ ಮುಂದಿದ್ದ ವಸ್ತು–ವಿಷಯವಾಗಿತ್ತು. ಪ್ರಶ್ನಿತ ತೀರ್ಪು ಮತ್ತು ಆದೇಶದ ಮೂಲಕ, ಒಮ್ಮೆ ಪ್ರತಿವಾದಿಯನ್ನು ನೇರ ನೇಮಕಾತಿಯ ಆಧಾರದ ಮೇಲೆ 'ಎನ್‌ಟಿಆರ್‌ಒ'ದಲ್ಲಿ ವಿಜ್ಞಾನಿ 'ಎಚ್' ಆಗಿ ನೇಮಿಸಲಾದ ಬಳಿಕ, 'ಎನ್‌ಟಿಆರ್‌ಒ' ಆಕೆ ಮೂಲತಃ 'ಡಿಆರ್‌ಡಿಒ'ದಲ್ಲಿ ಹೊಂದಿದ್ದ ಹುದ್ದೆಗಿಂತ ಕೆಳಗಿನ ಹುದ್ದೆಗೆ ಆಕೆಯನ್ನು ಮರಳಿಸಲು ಸಾಧ್ಯವಿರಲಿಲ್ಲ ಎಂದು ಗಮನಿಸಿಕೊಂಡು, ನ್ಯಾಯಾಧಿಕರಣವು

ಹೊರಡಿಸಿದ್ದ ತೀರ್ಪು ಹಾಗೂ ಆದೇಶವನ್ನು ಉಚ್ಚ ನ್ಯಾಯಾಲಯವು ವಜಾಗೊಳಿಸಿರುತ್ತದೆ. ನೇರ ನೇಮಕಾತಿಯ ಸಂದರ್ಭದಲ್ಲಿ ಹಿಂಪಡೆಯುವಿಕೆಯ ಪರಿಕಲ್ಪನೆಯು ಉದ್ಭವಿಸುವುದಿಲ್ಲ ಮತ್ತು ಆದ್ದರಿಂದ ಆಕೆಯನ್ನು 'ಡಿಆರ್‌ಡಿಒ'ಗೆ ವಿಜ್ಞಾನಿ 'ಜಿ' ಆಗಿ ವಾಪಸ್ ಕಳುಹಿಸಿರುವುದು ಕಾನೂನುಬಾಹಿರವಾಗಿದೆ ಎಂದು ಸಹ ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಅದಾಗ್ಯೂ, ತದನಂತರ ಉಚ್ಚ ನ್ಯಾಯಾಲಯವು ನ್ಯಾಯಾಧಿಕರಣವು ಹೊರಡಿಸಿದ್ದ ಆದೇಶವನ್ನು ಮಾರ್ಪಡಿಸಿ ದಿನಾಂಕ 12.02.2019ರ ಆದೇಶವನ್ನು ಕೇವಲ ಬಿಡುಗಡೆಯ ಆದೇಶ ಎಂಬಂತೆ ಓದತಕ್ಕದ್ದು ಎಂದು ಮತ್ತು ಆಕೆಯ ಸೇವಾಂತ್ಯ ಪ್ರಯೋಜನಗಳನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ 'ಡಿಆರ್‌ಡಿಒ'ದಲ್ಲಿ ಆಕೆ ಸಲ್ಲಿಸಿದ್ದ ಹಿಂದಿನ ಸೇವೆಯ ಪ್ರಯೋಜನವೂ ಸೇರಿದಂತೆ ಎಲ್ಲಾ ಆನುಷಂಗಿಕ ಪ್ರಯೋಜನಗಳಿಗೆ ಆಕೆ ಹಕ್ಕುದಾರಳಾಗಿರತಕ್ಕದ್ದು ಎಂದು ಆದೇಶಿಸಿರುತ್ತದೆ. ಪ್ರತಿವಾದಿಯವರು ವಿಜ್ಞಾನಿ 'ಎಚ್' ಹುದ್ದೆಯನ್ನು ಹೊಂದಿದ್ದಾರೆ ಮತ್ತು ಆ ಹುದ್ದೆಯಲ್ಲಿ ಕೊನೆಯದಾಗಿ ಪಡೆದ ವೇತನವು ಅವರ ಎಲ್ಲಾ ಪ್ರಯೋಜನಗಳನ್ನು ಇತ್ಯರ್ಥಪಡಿಸುವ ಮಾನದಂಡವಾಗಿದೆ ಎಂಬ ಹಿನ್ನೆಲೆಯಲ್ಲಿ ಆಕೆಗೆ ಅನುಮತಿಸಬಹುದಾಗಿರುವ ಅಂತಹ ಎಲ್ಲಾ ಪ್ರಯೋಜನಗಳನ್ನು ಪಡೆಯಲು ಆಕೆಯು ಹಕ್ಕುಳ್ಳವಳಾಗಿರುತ್ತಾಳೆ ಎಂದು ಉಚ್ಚ ನ್ಯಾಯಾಲಯವು ಮುಂದುವರೆದು ಸ್ಪಷ್ಟಪಡಿಸಿದೆ. ಈ ಹಂತದಲ್ಲಿ, ಮೂಲ ರಿಟ್ ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ವಕೀಲರು ಆಕೆಯ ಸ್ವಯಿಚ್ಛಾ ನಿವೃತ್ತಿ ಅರ್ಜಿಯನ್ನು ಸ್ವೀಕರಿಸುವ ಪ್ರಾರ್ಥನೆಯನ್ನು ಒತ್ತಾಯಿಸಲಿಲ್ಲ ಎಂಬುದನ್ನು ಗಮನಿಸುವುದು ಅಗತ್ಯವಾಗಿದೆ.

2.4 ಉಚ್ಚ ನ್ಯಾಯಾಲಯವು ನೀಡಿದ ಪ್ರಶ್ನಿತ ತೀರ್ಪು ಹಾಗೂ ಆದೇಶದಿಂದ ಬಾಧಿತರಾಗಿ ಹಾಗೂ ಅಸಮಾಧಾನಗೊಂಡು, ರಾಷ್ಟ್ರೀಯ ತಾಂತ್ರಿಕ ಸಂಶೋಧನಾ ಸಂಸ್ಥೆ ('ಎನ್‌ಟಿಆರ್‌ಒ') ಮತ್ತು ಇತರರು ಪ್ರಸ್ತುತ ಮನವಿಯನ್ನು ಸಲ್ಲಿಸಿದ್ದಾರೆ.

3. ‘ಎನ್‌ಟಿಆರ್‌ಒ’ ಪರವಾಗಿ ಹಾಜರಾಗಿರುವ ಮಾನ್ಯ ಎಎಸ್‌ಜಿ ಶ್ರೀಮತಿ ಐಶ್ವರ್ಯಾ ಭಾಟಿ ಅವರು ಮೊಕದ್ದಮೆಯ ಸಂಗತಿಗಳು ಮತ್ತು ಸನ್ನಿವೇಶಗಳಲ್ಲಿ ದಿನಾಂಕ 12.02.2019ರಂದು ಹೊರಡಿಸಿದ್ದ ಆದೇಶವನ್ನು ಕೇವಲ ಒಂದು ಬಿಡುಗಡೆಯ ಆದೇಶವಾಗಿ ಪರಿಗಣಿಸುವಂತೆ ನಿರ್ದೇಶಿಸುವಲ್ಲಿ ಉಚ್ಚ ನ್ಯಾಯಾಲಯವು ಗಂಭೀರ ಪ್ರಮಾದವನ್ನು ಎಸಗಿದೆ ಎಂದು ತೀವ್ರವಾಗಿ ಮಂಡಿಸಿರುತ್ತಾರೆ.

3.1 ಶ್ರೀಮತಿ ಭಾಟಿ ಅವರು ಪ್ರತಿವಾದಿಯನ್ನು ಒಂದು ಬಾರಿ ಮೂಲ ಇಲಾಖೆಗೆ ಅಂದರೆ ‘ಡಿಆರ್‌ಡಿಒ’ಗೆ ವಾಪಸ್ ಕಳುಹಿಸಿದ ನಂತರ ಹಾಗೂ ವಾಸ್ತವವಾಗಿ ಅವರು ‘ಡಿಆರ್‌ಡಿಒ’ದಲ್ಲಿ ಕರ್ತವ್ಯವನ್ನು ಪುನರಾರಂಭಿಸಿದ ನಂತರ, ಪ್ರತಿವಾದಿಯು ‘ಎನ್‌ಟಿಆರ್‌ಒ’ದ ಉದ್ಯೋಗಿಯಾಗಿರುವುದು ಕೊನೆಗೊಂಡಿತ್ತು ಎಂದು ವಾದಿಸಿದ್ದಾರೆ. ಆದ್ದರಿಂದ, ದಿನಾಂಕ 12.02.2019ರ ಆದೇಶವನ್ನು ಕೇವಲ ಒಂದು ಬಿಡುಗಡೆಯ ಆದೇಶವಾಗಿ ಪರಿಗಣಿಸುವಂತೆ ನಿರ್ದೇಶಿಸುವಲ್ಲಿ ಹಾಗೂ ಮುಂದುವರೆದು ಆಕೆಯ ಸೇವಾಂತ್ಯ ಪ್ರಯೋಜನಗಳನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ ‘ಡಿಆರ್‌ಡಿಒ’ದಲ್ಲಿ ಆಕೆ ಸಲ್ಲಿಸಿದ್ದ ಹಿಂದಿನ ಸೇವೆಯ ಪ್ರಯೋಜನವೂ ಸೇರಿದಂತೆ ಇಲ್ಲಾ ಆನುಷಂಗಿಕ ಪ್ರಯೋಜನಗಳಿಗೆ ಆಕೆ ಹಕ್ಕುದಾರಳಾಗಿರತಕ್ಕದ್ದು ಎಂದು ನಿರ್ದೇಶಿಸುವಲ್ಲಿ ಉಚ್ಚ ನ್ಯಾಯಾಲಯವು ಗಂಭೀರ ಪ್ರಮಾದವನ್ನು ಎಸಗಿದೆ ಎಂದು ವಾದಿಸಲಾಗಿದೆ. ಉಚ್ಚ ನ್ಯಾಯಾಲಯವು ನೀಡಿರುವ ಪ್ರಶ್ನಿತ ತೀರ್ಪು ಮತ್ತು ಆದೇಶವು ಡಿಒಪಿಟಿ–ಎಫ್‌ಆರ್ –9(13) ಹೊರಡಿಸಿರುವ ಸಂಬಂಧಿತ ಕಚೇರಿ ಜ್ಞಾಪನಕ್ಕೆ ವಿರುದ್ಧವಾಗಿದೆ ಎಂದು ಮಂಡಿಸಲಾಗಿದೆ.

3.2 ದಿನಾಂಕ 21.07.2014ರ ‘ಡಿಒಪಿಟಿ’ಯ ಒ.ಎಂ. (ಪರಿವೀಕ್ಷಣೆ ಮತ್ತು ಸ್ಥಿರೀಕರಣ) ಪರಿವೀಕ್ಷಣಾ ಅವಧಿಯಲ್ಲಿ ನೇಮಕಾತಿ ಪ್ರಾಧಿಕಾರವು ಅವನು/ಅವಳು ಮೂಲದಲ್ಲಿ ನಿರ್ವಹಿಸುತ್ತಿದ್ದ ಹುದ್ದೆಗೆ ಅವನ/ಅವಳ ಹೊಸ ನೇಮಕಾತಿಯ ಬೆನ್ನಲ್ಲೇ ಅವನು/ಅವಳು ಅದರ ಮೇಲೆ ಧಾರಣಾಧಿಕಾರ ಹೊಂದಿದ್ದರೆ

ಅವನನ್ನು/ಅವಳನ್ನು ವಾಪಸ್ಸು ಕಳುಹಿಸಬಹುದು ಅಥವಾ ಇತರ ಸಂದರ್ಭಗಳಲ್ಲಿ ಅವನನ್ನು/ಅವಳನ್ನು ಸೇವೆಯಿಂದ ಮುಕ್ತಗೊಳಿಸಬಹುದು ಅಥವಾ ವಜಾಗೊಳಿಸಬಹುದು ಎಂದು ನಿಬಂಧಿಸುತ್ತದೆ. ಸದರಿ ಒ.ಎಂ.ನ 14 ನೇ ಖಂಡಿಕೆಯ ಮೇರೆಗೆ ಪರಿವೀಕ್ಷಣಾ ಅವಧಿಯಲ್ಲಿ ಅಥವಾ ಅವಧಿಯ ಕೊನೆಯಲ್ಲಿ ಸೇವೆಯಿಂದ ಹಿಂತಿರುಗಿದ ಅಥವಾ ಬಿಡುಗಡೆಯಾದ ಪರಿವೀಕ್ಷಣೆಗೆ ಒಳಪಟ್ಟಿರುವ ಒಬ್ಬ ವ್ಯಕ್ತಿಯು ಯಾವುದೇ ಪರಿಹಾರಕ್ಕೆ ಹಕ್ಕುದಾರನಾಗಿರತಕ್ಕದ್ದಲ್ಲ ಎಂದು ವಾದಿಸಲಾಗಿದೆ.

3.3 ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದಿಯನ್ನು 'ಎನ್‌ಟಿಆರ್‌ಒ'ದಲ್ಲಿ ನೇರ ನೇಮಕಾತಿ ಮಾಡಿದಾಗ ಆಕೆಯನ್ನು ಪರಿವೀಕ್ಷಣಾ ಅವಧಿಯ ಆಧಾರದಲ್ಲಿ ನೇಮಿಸಲಾಗಿತ್ತು ಹಾಗೂ ಆಕೆಯು 'ಡಿಆರ್‌ಡಿಒ'ಗೆ ತಾಂತ್ರಿಕ ರಾಜೀನಾಮೆಯನ್ನು ಸಲ್ಲಿಸಿದ್ದರು, ಅದಾಗ್ಯೂ 'ಡಿಆರ್‌ಡಿಒ'ದಲ್ಲಿ ಆಕೆಗಿದ್ದ ಧಾರಣಾಧಿಕಾರ ಮುಂದುವರೆದಿತ್ತು ಎಂದು ಮಂಡಿಸಲಾಗಿದೆ. ಆದ್ದರಿಂದ, ಪರಿವೀಕ್ಷಣಾ ಅವಧಿಯಲ್ಲಿ ಆಕೆಯ ಕೆಲಸ ತೃಪ್ತಿಕರವಾಗಿಲ್ಲದಿದ್ದುದರಿಂದ, ಎಸಿಸಿ ಸಮಿತಿಯು ಆಕೆಯು ತನ್ನ ಧಾರಣಾಧಿಕಾರವನ್ನು ಮುಂದುವರೆಸಿದ್ದ ಮಾತೃ ಇಲಾಖೆ ಅಂದರೆ 'ಡಿಆರ್‌ಡಿಒ'ಗೆ ಆಕೆಯನ್ನು ವಾಪಸ್ ಕಳುಹಿಸುವ ಪ್ರಜ್ಞಾಪೂರ್ವಕವಾದ ನಿರ್ಣಯವನ್ನು ಕೈಗೊಂಡಿತು ಎಂದು ಮಂಡಿಸಲಾಗಿದೆ. ಆದ್ದರಿಂದ ಪ್ರತಿವಾದಿಯು 'ಎನ್‌ಟಿಆರ್‌ಒ'ದೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಆಕೆಯ ಪರಿವೀಕ್ಷಣಾ ಅವಧಿಯಲ್ಲಿ ಆಕೆಯನ್ನು ತನ್ನ ಮೂಲ ಮಾತೃ ಇಲಾಖೆಯಾದ 'ಡಿಆರ್‌ಡಿಒ'ಗೆ ವಾಪಸ್ ಕಳುಹಿಸಿರುವುದು ಸಂಪೂರ್ಣವಾಗಿ ದಿನಾಂಕ 21.07.2014ರ 'ಡಿಒಪಿಟಿ'ಯ ಒ.ಎಂ.ಗೆ ಅನುಗುಣವಾಗಿತ್ತು ಎಂದು ಮಂಡಿಸಲಾಗಿದೆ.

3.4 ಎಫ್‌ಆರ್–9(13)ರ ಪ್ರಕಾರ 'ಧಾರಣಾಧಿಕಾರ' ಎಂಬ ಪದದ ಅರ್ಥವೇನೆಂದರೆ, ತಕ್ಷಣವೇ ಅಥವಾ ಅನುಪಸ್ಥಿತಿಯ ಅವಧಿ ಅಥವಾ ಅವಧಿಗಳು ಮುಕ್ತಾಯಗೊಂಡ ನಂತರ, ಒಬ್ಬ ಸರ್ಕಾರಿ ನೌಕರನು/ಳು ನಿಯಮಿತ ಆಧಾರದ ಮೇಲೆ ನೇಮಕಗೊಂಡಿರುವ ಹಾಗೂ ಅವನು/ಅವಳು ಪರಿವೀಕ್ಷಣಾ ಆಧಾರದಲ್ಲಿ ಇರದಿದ್ದ ನಿರ್ದಿಷ್ಟಾವಧಿಯ ಹುದ್ದೆಯನ್ನೂ ಒಳಗೊಂಡಂತೆ ಅವನು/ಅವಳು ನಿಯಮಿತ ಆಧಾರದ ಮೇಲೆ ಒಂದು ಹುದ್ದೆಯನ್ನು ವಹಿಸಿಕೊಳ್ಳಲು ಒಬ್ಬ ಸರ್ಕಾರಿ ನೌಕರನು/ಳು ಹೊಂದಿರುವ ಹಕ್ಕು ಎಂದು ಮಂಡಿಸಲಾಗಿದೆ. ದಿನಾಂಕ 17.08.2016ರ 'ಡಿಒಪಿಟಿ'ಯ ಒ.ಎಂ. (ತಾಂತ್ರಿಕ ರಾಜೀನಾಮೆ ಮತ್ತು ಧಾರಣಾಧಿಕಾರ) ತಾಂತ್ರಿಕ ರಾಜೀನಾಮೆಯ ನಂತರ ಸರ್ಕಾರಿ ನೌಕರರು ಹೊಂದಿರುವ ಹುದ್ದೆಯಲ್ಲಿ ಜ್ಯೇಷ್ಠತೆಯನ್ನು ಸ್ಥಿರತೆಯ ಆಧಾರದ ಮೇಲೆ ಸಂರಕ್ಷಿಸಲಾಗಿರುತ್ತದೆ ಎಂದು ನಿಬಂಧಿಸುತ್ತದೆ ಎಂದು ವಾದಿಸಲಾಗಿದೆ. ಆದ್ದರಿಂದ ತಾಂತ್ರಿಕ ರಾಜೀನಾಮೆಯಲ್ಲಿ ಪ್ರತಿವಾದಿಯ ಜ್ಯೇಷ್ಠತೆಯು 'ಡಿಆರ್‌ಡಿಒ'ದಲ್ಲಿ ವಿಜ್ಞಾನಿ 'ಜಿ' ಆಗಿ ಸಂರಕ್ಷಿಸಲ್ಪಟ್ಟಿರುತ್ತದೆ ಎಂದು ವಾದಿಸಲಾಗಿದೆ.

3.5 ಮಾನ್ಯ ಎಎಸ್‌ಜಿ ಶ್ರೀಮತಿ ಐಶ್ವರ್ಯಾ ಭಾಟಿ ಅವರು ದಿನಾಂಕ 17.08.2016ರ 'ಡಿಒಪಿಟಿ'ಯ ಒ.ಎಂ.ನ ಸಂಬಂಧಿತ ಖಂಡಿಕೆಗಳತ್ತ, ಅದರಲ್ಲೂ ವಿಶೇಷವಾಗಿ, ಖಂಡಿಕೆ ಸಂಖ್ಯೆ 2.6, 3.1, 3.2(ಬಿ), 3.3 ಮತ್ತು 3.4.1ಗಳತ್ತ ನಮ್ಮ ಗಮನವನ್ನು ಸೆಳೆದಿದ್ದಾರೆ. ಆದ್ದರಿಂದ, ಕೇಂದ್ರ ಸರ್ಕಾರದ ಮತ್ತೊಂದು ಇಲಾಖೆ/ಕಚೇರಿ/ರಾಜ್ಯ ಸರ್ಕಾರದಲ್ಲಿ ನೇಮಕಗೊಂಡ ಖಾಯಂ ಸರ್ಕಾರಿ ನೌಕರರನ್ನು, ಅವನು/ಅವಳು ಸೇರಿರುವ ಇಲಾಖೆಯಲ್ಲಿ ಸ್ಥಿರೀಕರಿಸದಿದ್ದರೆ, 2 ವರ್ಷ ಅಥವಾ ಅಸಾಧಾರಣ ಸಂದರ್ಭದಲ್ಲಿ 3 ವರ್ಷಗಳ ಅವಧಿಯೊಳಗಾಗಿ ಆ ಇಲಾಖೆಗೆ ಮರಳದ ಹೊರತು ಅವನ/ಅವಳ ಮಾತೃ ಇಲಾಖೆಗೆ ರಾಜೀನಾಮೆ ನೀಡಬೇಕಾಗುತ್ತದೆ ಎಂದು ಮಂಡಿಸಲಾಗಿದೆ. ಯಾವುದೇ ಪರಿಸ್ಥಿತಿಯಲ್ಲಿ ಯಾವುದೇ ಹುದ್ದೆಯ ಮೇಲೆ ಮೂಲದಲ್ಲಿ ನಿರ್ವಹಿಸುತ್ತಿದ್ದ ಹುದ್ದೆಯ ಮೇಲೆ ಹೊಂದಿರುವ ಧಾರಣಾಧಿಕಾರವನ್ನು ಅದರ ಫಲಿತಾಂಶವು

ಖಾಯಂ ಹುದ್ದೆಯ ಮೇಲೆ ಧಾರಣಾಧಿಕಾರವಿಲ್ಲದೆ ಇರುವುದು ಎಂದಾಗಿದ್ದ ಪಕ್ಷದಲ್ಲಿ, ಅವನ/ಅವಳ ಒಪ್ಪಿಗೆ ಇದ್ದರೂ ಸಹ ಕೊನೆಗೊಳಿಸಲಾಗುವುದಿಲ್ಲ ಎಂದು ವಾದಿಸಲಾಗಿದೆ. ಪ್ರಸ್ತುತ ಮೊಕದ್ದಮೆಯಲ್ಲಿ ಪ್ರತಿವಾದಿಯು ಖಾಯಂ ಸರ್ಕಾರಿ ನೌಕರರಾಗಿರುವುದರಿಂದ ಮತ್ತು 'ಡಿಆರ್‌ಡಿಒ'ದಲ್ಲಿ ವಿಜ್ಞಾನಿ 'ಜಿ' ಹುದ್ದೆಯ ಧಾರಣಾಧಿಕಾರದಲ್ಲಿರುವುದಿಂದ, ಸಿಸಿಎಸ್ (ಪಿಂಚಣಿ) ನಿಯಮಗಳು, 1972ರ ಅಡಿಯಲ್ಲಿ ಅವರು ವಿಜ್ಞಾನಿ 'ಎಚ್' (ಪರಿವೀಕ್ಷಣೆಯ ಮೇಲೆ) ಪಿಂಚಣಿ ಪ್ರಯೋಜನೆಗಳಿಗೆ ಅರ್ಹವಾಗುವ ಸೇವೆಯ ಪ್ರಯೋಜನವನ್ನು ಪಡೆಯಲು ಸಾಧ್ಯವಿರುವುದಿಲ್ಲ, ಏಕೆಂದರೆ ಅವರು 'ಎನ್‌ಟಿಆರ್‌ಒ'ದಲ್ಲಿ ವಿಜ್ಞಾನಿ 'ಎಚ್' ಹುದ್ದೆಗೆ ಸಂಬಂಧಿಸಿದಂತೆ ಪರಿವೀಕ್ಷಣೆಯಲ್ಲಿರುವ ಸಮಯದಲ್ಲಿ ತಾತ್ಕಾಲಿಕ ಸೇವೆಯಲ್ಲಿದ್ದರು ಎಂದು ವಾದಿಸಲಾಗಿದೆ.

3.6 ಸಿಸಿಎಸ್ (ಪಿಂಚಣಿ) ನಿಯಮಗಳು, 1972ರ 13ನೇ ನಿಯಮದ ಮೇರೆಗೆ ಈ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಸರ್ಕಾರಿ ನೌಕರರ ಅರ್ಹತಾ ಸೇವೆಯು ಅವನು/ಅವಳು ಮೊದಲು ನೇಮಕಗೊಂಡ ಹುದ್ದೆಯು ಮೂಲದಲ್ಲಿ ಅಥವಾ ಸ್ಥಾನಪನ್ನ ಅಥವಾ ತಾತ್ಕಾಲಿಕ ಸಾಮರ್ಥ್ಯದಲ್ಲಿ, ಅದೇ ಸೇವೆ ಅಥವಾ ಮತ್ತೊಂದು ಸೇವೆ ಅಥವಾ ಹುದ್ದೆಯಲ್ಲಿ ಮೂಲ ನೇಮಕಾತಿಯ ಮೂಲಕ ಯಾವುದೇ ಅಡೆತಡೆಯಿಲ್ಲದೆ ಅಂತಹ ಸ್ಥಾನಪನ್ನತೆ ಅಥವಾ ತಾತ್ಕಾಲಿಕ ಸೇವೆಯನ್ನು ಅನುಸರಿಸಲಾಗಿದೆ ಎಂಬ ಉಪಬಂಧಕ್ಕೆ ಒಳಪಟ್ಟು ವಹಿಸಿಕೊಂಡ ದಿನಾಂಕದಿಂದ ಪ್ರಾರಂಭವಾಗತಕ್ಕದ್ದು ಎಂದು ಮುಂದುವರಿದು ಮಂಡಿಸಲಾಗಿದೆ.

3.7 ಆದ್ದರಿಂದ, ಪ್ರತಿವಾದಿಯ ಸೇವಾಂತ್ಯದ ಪ್ರಯೋಜನಗಳನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ 'ಡಿಆರ್‌ಡಿಒ'ದಲ್ಲಿ ಸಲ್ಲಿಸಿದ್ದ ಹಿಂದಿನ ಸೇವೆಯ ಪ್ರಯೋಜನವೂ ಸೇರಿದಂತೆ ಎಲ್ಲಾ ಆನುಷಂಗಿಕ ಪ್ರಯೋಜನಗಳಿಗೆ ಆಕೆಯು ಹಕ್ಕುದಾರಳಾಗಿದ್ದಾಳೆ ಎಂದು ನಿರ್ದೇಶಿಸುವಲ್ಲಿ ಹಾಗೂ ಆಕೆಯ

ಬಿಡುಗಡೆಯನ್ನು ಕೇವಲ 'ಎನ್‌ಟಿಆರ್‌ಒ'ದ ಸೇವೆಯಿಂದ ಮಾಡಿದ ಬಿಡುಗಡೆ ಎಂದು ಪರಿಗಣಿಸಲು ನಿರ್ದೇಶಿಸುವಲ್ಲಿ ಉಚ್ಚ ನ್ಯಾಯಾಲಯವು ಗಣನೀಯವಾದ ಪ್ರಮಾದ ಎಸಗಿದೆ ಎಂದು ಮಂಡಿಸಲಾಗಿದೆ.

4. ಮಾನ್ಯ ಹಿರಿಯ ವಕೀಲರಾದ ಶ್ರೀ ಗೋಪಾಲ್ ಶಂಕರನಾರಾಯಣನ್ ಅವರು, ಪ್ರಸ್ತುತ ಅಪೀಲನ್ನು ವಿರೋಧಿಸುತ್ತಾ, ಮೊಕದ್ದಮೆಯ ಸಂಗತಿಗಳು ಮತ್ತು ಸನ್ನಿವೇಶಗಳಲ್ಲಿ ದಿನಾಂಕ 12.02.2019ರ ಸಂವಹನವನ್ನು ಕೇವಲ ಬಿಡುಗಡೆಯ ಆದೇಶ ಎಂದು ಪರಿಗಣಿಸಲು ನಿರ್ದೇಶಿಸುವಲ್ಲಿ ಮತ್ತು ನಂತರ 'ಡಿಆರ್‌ಡಿಒ'ದಲ್ಲಿ ಆಕೆ ಸಲ್ಲಿಸಿದ್ದ ಹಿಂದಿನ ಸೇವೆಯನ್ನು ಪರಿಗಣಿಸುವಾಗ 'ಎನ್‌ಟಿಆರ್‌ಒ'ದ ವಿಜ್ಞಾನಿ 'ಎಚ್' ಎಂದು ಪರಿಗಣಿಸಲು ಮತ್ತು/ಅಥವಾ ಸೇವಾಂತ್ಯದ ಪ್ರಯೋಜನಗಳನ್ನು ಮಂಜೂರು ಮಾಡಲು ನಿರ್ದೇಶಿಸುವಲ್ಲಿ ಉಚ್ಚ ನ್ಯಾಯಾಲಯವು ಯಾವುದೇ ಪ್ರಮಾದ ಎಸಗಿಲ್ಲ ಎಂದು ವಾದಿಸಿದ್ದಾರೆ.

4.1 ಹಿರಿಯ ವಕೀಲರಾದ ಶ್ರೀ ಗೋಪಾಲ್ ಶಂಕರನಾರಾಯಣನ್ ಅವರು ದಿನಾಂಕ 12.02.2019ರ ಸಂವಹನದ ಮೂಲಕ, 'ಎನ್‌ಟಿಆರ್‌ಒ' ಪ್ರತಿವಾದಿಯನ್ನು ಏಕಾಏಕಿಯಾಗಿ 'ಡಿಆರ್‌ಡಿಒ'ಗೆ ವಿಜ್ಞಾನಿ–ಜಿ ಆಗಿ ವಾಪಸ್ ಕಳುಹಿಸಿದೆ ಎಂದು ಆಗ್ರಹಪೂರ್ವಕವಾಗಿ ವಾದಿಸಿದ್ದಾರೆ. ಪ್ರತಿವಾದಿಯು ನೇರ ನೇಮಕಾತಿಯಲ್ಲಿ 'ಎನ್‌ಟಿಆರ್‌ಒ'ದೊಂದಿಗೆ ವಿಜ್ಞಾನಿ 'ಎಚ್' ಆಗಿ ನೇಮಕಗೊಂಡಾಗ ಮತ್ತು 2 ವರ್ಷಗಳ ಅವಧಿಯ ಪರಿವೀಕ್ಷಣೆಯಲ್ಲಿದ್ದಾಗ, ಆ ಬಳಿಕ ಆಕೆಯನ್ನು 'ಡಿಆರ್‌ಡಿಒ'ಗೆ ಅದರಲ್ಲೂ ಕೆಳಗಿನ ಹುದ್ದೆ, ಎಂದರೆ ವಿಜ್ಞಾನಿ 'ಜಿ' ಹುದ್ದೆಗೆ ವಾಪಸ್ ಕಳುಹಿಸುವುದು ಸಾಧ್ಯವಿರಲಿಲ್ಲ ಎಂದು ಮಂಡಿಸಲಾಗಿದೆ.

4.2 ದಿನಾಂಕ 12.02.2019ರ ನಂತರ, ಆರಂಭದಿಂದಲೂ ಪ್ರತಿವಾದಿ 'ಡಿಆರ್‌ಡಿಒ'ದಲ್ಲಿ ಸಹ ವಿಜ್ಞಾನಿ 'ಎಚ್' ಆಗಿ ನೇಮಕಾತಿ/ನಿಯೋಜನೆಗೆ ಒತ್ತಾಯಿಸಿದ್ದರು ಎಂಬುದು ವಿವಿಧ ಸಂವಹನಗಳಿಂದ

ಸ್ಪಷ್ಟವಾಗುತ್ತದೆ. ಪ್ರತಿವಾದಿಯನ್ನು 'ಸಿಎಐಆರ್', 'ಡಿಆರ್‌ಡಿಒ'ದ ವಿಜ್ಞಾನಿ 'ಜಿ' ಎಂಬ ಕೆಳ ಹುದ್ದೆಗೆ ಮರಳಿಸಿದಾಗ ಮತ್ತು ಆಕೆಯನ್ನು 'ಸಿಎಐಆರ್', 'ಡಿಆರ್‌ಡಿಒ'ದ ವಿಜ್ಞಾನಿ 'ಎಚ್' ಹುದ್ದೆಗೆ ನೇಮಿಸುವ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳದಿದ್ದಾಗ, ಪ್ರತಿವಾದಿಯು ಮೂರು ತಿಂಗಳ ರಜೆಯನ್ನು ತೆಗೆದುಕೊಂಡರು ಎಂದು ಮಂಡಿಸಲಾಗಿದೆ. ತದನಂತರ ಆಕೆ ರಜೆಯ ಮೇಲೆ ಮುಂದುವರೆದಿದ್ದರು ಮತ್ತು ಎಂದಿಗೂ 'ಡಿಆರ್‌ಡಿಒ'ದ 'ಸಿಎಐಆರ್'ನಲ್ಲಿ ವಿಜ್ಞಾನಿ 'ಜಿ' ಆಗಿ ಕಾರ್ಯ ನಿರ್ವಹಿಸಿರಲಿಲ್ಲ ಎಂದು ವಾದಿಸಲಾಗಿದೆ.

4.3 ವಿಜ್ಞಾನಿ 'ಎಚ್' ಹುದ್ದೆಗೆ ಪದೋನ್ನತಿ/ನೇಮಕಾತಿಗಾಗಿ 'ಡಿಆರ್‌ಡಿಒ'ಗೆ ವೈಯಕ್ತಿಕ ವಿವರಗಳನ್ನು ನೀಡುವುದೂ ಸಹ ಪ್ರತಿವಾದಿಗೆ ಅಡ್ಡಿಯಾಗತಕ್ಕದ್ದಲ್ಲ, ಏಕೆಂದರೆ ವಾಸ್ತವವಾಗಿ ಆಕೆ ತನ್ನ ವೈಯಕ್ತಿಕ ವಿವರಗಳನ್ನು ಸಲ್ಲಿಸಲು ಒತ್ತಾಯಿಸಲ್ಪಟ್ಟಿದ್ದರು ಎಂದು ಮಂಡಿಸಲಾಗಿದೆ.

4.4 ಅಪೀಲುದಾರರು ಸಹ ದಿನಾಂಕ 24.04.2019ರಂದು 'ಡಿಆರ್‌ಡಿಒ'ದಲ್ಲಿನ 'ಸಿಎಐಆರ್'ನ ನಿರ್ದೇಶಕರ ಮೂಲಕ ಆಕೆಗೆ ರಜೆಗೆ ಅರ್ಜಿ ಸಲ್ಲಿಸುವಂತೆ ಹೇಳಿ ಕೆಲವು ಸೂಚನೆಗಳನ್ನು ಪ್ರತಿವಾದಿಗೆ ನೀಡಿದ್ದು, ಪ್ರತಿವಾದಿ ದಿನಾಂಕ 13.02.2019ರಿಂದ ದಿನಾಂಕ 28.06.2019ರ ವರೆಗೆ 3 ತಿಂಗಳ ರಜೆಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದು ಮಂಡಿಸಲಾಗಿದೆ. ವಾಸ್ತವವಾಗಿ ಪ್ರತಿವಾದಿಯು ತಾನು ದಿನಾಂಕ 13.02.2019ರಿಂದ 28.06.2019ರ ವರೆಗೆ ಗಳಿಕೆ ರಜೆಯನ್ನು ಕೋರಿದ್ದಾಗಿ ಸ್ಪಷ್ಟಪಡಿಸಿದ್ದಾಗಿ ಮಂಡಿಸಲಾಗಿದೆ.

4.5 ಪ್ರತಿವಾದಿಯು ತಮಗೆ ಆ ರೀತಿ ಮಾಡಲು ನಿರ್ದೇಶಿಸಿದ್ದರ ಕಾರಣದಿಂದಾಗಿ ಪದೋನ್ನತಿ ಮಂಡಳಿಗೆ ಹಾಜರಾಗಲು ಆಯ್ದುಕೊಂಡಿದ್ದು, ಆಕೆಗೆ ಈ ವಿಷಯದಲ್ಲಿ ಯಾವುದೇ ಆಯ್ಕೆಯಿರಲಿಲ್ಲ ಎಂದು

ಮಂಡಿಸಲಾಗಿದೆ. ಆಕೆಯು ಒಂದು ದಿನದ ಅಲ್ಪಾವಧಿಯ ನೋಟಿಸಿನಲ್ಲಿ ಯಾವುದೇ ತಯಾರಿ ಇಲ್ಲದೆ ಹಾಜರಾಗಿದ್ದರು, ಏಕೆಂದರೆ ಹಾಗೆ ಮಾಡುವಲ್ಲಿ ವಿಫಲರಾಗಿದ್ದರೆ ಅದು ಶಿಸ್ತು ಕ್ರಮವನ್ನು ಕೈಗೊಳ್ಳಲು ದಾರಿಯಾಗುತ್ತಿತ್ತು. ದಿನಾಂಕ 12.09.2019ರ 'ಎನ್‌ಟಿಆರ್‌ಒ'ದ ಆದೇಶಕ್ಕೆ ಸಂಬಂಧಿಸಿದಂತೆ ಅವರು ವಿಧ್ಯುಕ್ತವಾಗಿ ತಮ್ಮ ಮೇಲಧಿಕಾರಿಗಳಿಗೆ ಮೌಖಿಕವಾಗಿ ಮತ್ತು ಲಿಖಿತ ರೂಪದಲ್ಲಿ ಸಲ್ಲಿಸಿದ್ದ ತಮ್ಮ ಕುಂದುಕೊರತೆಗಳನ್ನು ಪರಿಹರಿಸುವವರೆಗೆ, ಪ್ರತಿವಾದಿಯು ತಮಗೆ ನೀಡಿದ್ದ ಪ್ರತಿಯೊಂದು ಸರ್ಕಾರಿ ಆದೇಶವನ್ನು ಪಾಲಿಸಲು ಬದ್ಧರಾಗಿದ್ದರು ಎಂದು ಮಂಡಿಸಲಾಗಿದೆ.

4.6 ಪದೋನ್ನತಿ ಮಂಡಳಿಗೆ ಸಲ್ಲಿಸಿದ್ದ ತನ್ನ ವೈಯಕ್ತಿಕ ಮಾಹಿತಿಯಲ್ಲಿ, ಆಕೆಯು ರಜೆಯ ಸಮಯದಲ್ಲಿ ಮಂಡಳಿಗೆ ಹಾಜರಾಗುತ್ತಿದ್ದೇನೆ ಎಂದು ನಿರ್ದಿಷ್ಟವಾಗಿ ಹೇಳಿದ್ದಾರೆ ಎಂದು ಮಂಡಿಸಲಾಗಿದೆ. ಈ ವೈಯಕ್ತಿಕ ಮಾಹಿತಿಯಲ್ಲಿ ಆಕೆಯು ದಿನಾಂಕ 29.03.2019ರಂದು 'ಸಿಎಐಆರ್'ನಿಂದ ಪತ್ರವನ್ನು ಸ್ವೀಕರಿಸಿದ್ದಾರೆ ಎಂದು ತಿಳಿಸಿದ್ದು, ಅದರಲ್ಲಿ ಆಕೆಯನ್ನು 'ಸಿಎಐಆರ್', 'ಡಿಆರ್‌ಡಿಒ'ದ ವಿಜ್ಞಾನಿ 'ಜಿ' ಹುದ್ದೆಗೆ ನೇಮಿಸಲಾಗಿದೆ ಎಂದು ಉಲ್ಲೇಖಿಸಲಾಗಿದೆ ಎಂದು ಮಂಡಿಸಲಾಗಿದೆ. ಇದು ಒಂದು ಸತ್ಯ ಸಂಗತಿಯ ಹೇಳಿಕೆಯಾಗಿದ್ದು, ಅದು ಪ್ರತಿವಾದಿಯನ್ನು ವಿಜ್ಞಾನಿ 'ಜಿ' ಆಗಿ ನೇಮಕಗೊಳಿಸುವ 'ಡಿಆರ್‌ಡಿಒ'ದ ಅನೂರ್ಜಿತ ಆದೇಶವನ್ನು ಆಕೆ ಮಾಡಿರುವ ಸ್ವೀಕಾರ ಎಂದು ಅರ್ಥೈಸಿಕೊಳ್ಳಲಾಗದು.

4.7 'ಎನ್‌ಟಿಆರ್‌ಒ'ದಲ್ಲಿ ನೇರ ನೇಮಕಾತಿಯ ಆಧಾರದಲ್ಲಿ ವಿಜ್ಞಾನಿ 'ಎಚ್' ಆಗಿ ಕಾರ್ಯ ನಿರ್ವಹಿಸುತ್ತಿದ್ದ ಆಕೆ, ತನ್ನ ಮಾತೃ ಇಲಾಖೆಯಾದ 'ಡಿಆರ್‌ಡಿಒ'ಗೆ ವಿಜ್ಞಾನಿ 'ಜಿ' ಆಗಿ ಹಿಂತಿರುಗಿಸಲು/ವಾಪಸ್ ಕಳುಹಿಸಲು ಸಾಧ್ಯವಿರಲಿಲ್ಲ ಎಂದು ಮುಂದುವರೆದು ಮಂಡಿಸಲಾಗಿದೆ.

4.8 ಈಗ, ಅಪೀಲುದಾರರ ಪರವಾಗಿ 'ಡಿಆರ್‌ಡಿಒ'ದಲ್ಲಿ ಆಕೆಯ ಮುಂದುವರೆದ ಧಾರಣಾಧಿಕಾರದ ಬಗ್ಗೆ ಸಲ್ಲಿಸಿರುವ ವಾದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಈ ಸದರಿ ಉಪಬಂಧವು ಪ್ರತಿವಾದಿಯ ಪರವಾಗಿದೆ ಮತ್ತು ಪ್ರತಿವಾದಿ/ಉದ್ಯೋಗಿಗೆ ಧಾರಣಾಧಿಕಾರವನ್ನು ಮುಂದುವರೆಸುವ ವಿವೇಚನಾಧಿಕಾರವಿತ್ತು ಎಂದು ಮಂಡಿಸಲಾಗಿದೆ. ಉದ್ಯೋಗದಾತ ಮತ್ತು/ಅಥವಾ ತರುವಾಯದ ಉದ್ಯೋಗದಾತನ ಸೂಚನೆಯಂತೆ ತನ್ನಷ್ಟಕ್ಕೆ ತಾನೇ ಧಾರಣಾಧಿಕಾರ ಇರುವಂತಿಲ್ಲ ಎಂದು ಮಂಡಿಸಲಾಗಿದೆ. 'ಧಾರಣಾಧಿಕಾರ' ಎಂದರೆ ಒಬ್ಬ ಸರ್ಕಾರಿ ಉದ್ಯೋಗಿಯ ಹಕ್ಕು ಮತ್ತು ಇದು ಪ್ರತಿವಾದಿಯ ಇಚ್ಛೆಯ ಮೇರೆಗೆ ಇದೆ ಮತ್ತು ಪ್ರತಿವಾದಿಗೆ ಅವಳ ಧಾರಣಾಧಿಕಾರವನ್ನು ಚಲಾಯಿಸಲು ಒತ್ತಾಯಿಸಲಾಗುವುದಿಲ್ಲ ಎಂದು ಮಂಡಿಸಲಾಗಿದೆ.

4.9 ***ರಾಜಸ್ಥಾನ ರಾಜ್ಯ ಮತ್ತು ಇತರರು ವಿರುದ್ಧ ಎಸ್. ಎನ್. ತಿವಾರಿ ಮತ್ತು ಇತರರು (2009) 4 ಎಸ್‌ಸಿಸಿ 700 (17 ಮತ್ತು 19ನೇ ಖಂಡಿಕೆ)*** ಹಾಗೂ ***ಕಾನೂನುಬದ್ಧ ಪ್ರತಿನಿಧಿಗಳ ಮೂಲಕ ರಾಮ್‌ಲಾಲ್ ಖುರಾನಾ (ಮೃತ) ವಿರುದ್ಧ ಪಂಜಾಬ್ ರಾಜ್ಯ ಮತ್ತು ಇತರರು (1989) 4 ಎಸ್‌ಸಿಸಿ 99 (8ನೇ ಖಂಡಿಕೆ),*** ಈ ಪ್ರಕರಣಗಳಲ್ಲಿ ಈ ನ್ಯಾಯಾಲಯದ ನಿರ್ಣಯಗಳನ್ನು ಅವಲಂಬಿಸಿ, ಈ ನ್ಯಾಯಾಲಯವು ಗಮನಿಸಿದಂತೆ ಮತ್ತು ನಿರ್ಣಯಿಸಿರುವಂತೆ, ಧಾರಣಾಧಿಕಾರವು ಸಂಪೂರ್ಣವಾಗಿ ಉದ್ಯೋಗಿಯ ವಿವೇಚನೆಗೆ ಅನುಸಾರವಾಗಿರುತ್ತದೆ ಎಂದು ಮಂಡಿಸಲಾಗಿದೆ. ಆದ್ದರಿಂದ, ಉದ್ಯೋಗದಾತರು ಧಾರಣಾಧಿಕಾರವನ್ನು ಒತ್ತಾಯಪೂರ್ವಕವಾಗಿ ಹೇರಲು ಸಾಧ್ಯವಿಲ್ಲ, ಏಕೆಂದರೆ ಅದು ಉದ್ಯೋಗಿಯ ಸ್ಥಾನ ಮತ್ತು ಭವಿಷ್ಯದ ಮೇಲೆ ಹಾನಿಕರ ಪರಿಣಾಮ ಬೀರಬಹುದಾಗಿರುತ್ತದೆ ಎಂದು ಮಂಡಿಸಲಾಗಿದೆ.

4.10 ಅದಲ್ಲದೆಯೂ ಸಹ ಪ್ರತಿವಾದಿಯು ವಿಜ್ಞಾನಿ 'ಎಚ್' ಆಗಿ ಪಡೆದ ಕೊನೆಯ ವೇತನದ ಮೇಲೆ ಪಿಂಚಣಿ ಪಡೆಯಲು ಹಕ್ಕುಳ್ಳವರಾಗಿದ್ದಾರೆ ಎಂದು ಪ್ರತಿವಾದಿಯ ಪರವಾಗಿ ಹಾಜರಾಗುವ ಮಾನ್ಯ ಹಿರಿಯ

ವಕೀಲರು ಮುಂದುವರೆದು ಮಂಡಿಸಿದ್ದಾರೆ. 'ಎನ್‌ಟಿಆರ್‌ಒ'ದ ನೇಮಕಾತಿಯ ಷರತ್ತುಗಳು ಪ್ರತಿವಾದಿಯ ಸೇವೆಯನ್ನು ಸಿಸಿಆರ್ (ತಾತ್ಕಾಲಿಕ ಸೇವೆ) ನಿಯಮಗಳು, 1965ರ ಅಡಿಯಲ್ಲಿ ಅಂತ್ಯಗೊಳಿಸಬಹುದಾಗಿದೆ ಎಂಬುದನ್ನು ಸೂಚಿಸುತ್ತವೆ ಎಂದಾದರೂ ಸಹ, ಸದರಿ ನಿಯಮಗಳು ಪ್ರತಿವಾದಿಯು ಆಕೆ ಕೊನೆಗೆ ಪಡೆದ ವೇತನದ ಆಧಾರದ ಮೇಲೆ ಪಿಂಚಣಿ ಪಡೆಯಲು ಹಕ್ಕುಳ್ಳವರಾಗಿಲ್ಲ ಎಂದು ಎಲ್ಲಿಯೂ ಉಲ್ಲೇಖಿಸುವುದಿಲ್ಲ. "ಭಾರತ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದ ಅಡಿಯಲ್ಲಿನ ಯಾವುದೇ ಹುದ್ದೆಯಲ್ಲಿ ಧಾರಣಾಧಿಕಾರ ಅಥವಾ ತಡೆಹಿಡಿದ ಧಾರಣಾಧಿಕಾರ ಹೊಂದಿಲ್ಲದ" ಉದ್ಯೋಗಿಗಳಿಗೆ ಸಿಸಿಎಸ್ (ತಾತ್ಕಾಲಿಕ ಸೇವೆ) ನಿಯಮಗಳು, 1965 ಅನ್ವಯಿಸತಕ್ಕದ್ದು ಎಂದು ಮಂಡಿಸಲಾಗಿದೆ.

4.11 ಸಿಸಿಎಸ್ (ಪಿಂಚಣಿ) ನಿಯಮಗಳು, 1972ರ 2ನೇ ನಿಯಮದ ಮೇರೆಗೆ ಪಿಂಚಣಿ ನಿಯಮಗಳನ್ನು ಅನ್ವಯಿಸುವಲ್ಲಿ ತಾತ್ಕಾಲಿಕ ಮತ್ತು ಖಾಯಂ ಉದ್ಯೋಗಿಗಳ ನಡುವೆ ಯಾವುದೇ ವ್ಯತ್ಯಾಸವಿರುವುದಿಲ್ಲ ಎಂದು ಮಂಡಿಸಲಾಗಿದೆ. ಪಿಂಚಣಿ ನಿಯಮಗಳ 13ನೇ ನಿಯಮದ ಮೇರೆಗೆ ಸರ್ಕಾರಿ ನೌಕರನೊಬ್ಬನ ಅರ್ಹತಾ ಸೇವೆಯು ಅವನು ಮೊದಲು ಮೂಲತಃ ನೇಮಕಗೊಂಡ ಹುದ್ದೆಯ ಅಧಿಕಾರ ವಹಿಸಿಕೊಂಡ ದಿನದಿಂದ ಪ್ರಾರಂಭವಾಗುತ್ತದೆ ಎಂದು ಮಂಡಿಸಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ, ಪ್ರತಿವಾದಿಯನ್ನು ಮೊದಲು ದಿನಾಂಕ 12.09.1988ರಂದು ಮೂಲ ಹುದ್ದೆಗೆ ನೇಮಿಸಲಾಯಿತು ಎಂದು ಮಂಡಿಸಲಾಗಿದೆ. ಆಕೆಯು ಇದೇ ದಿನಾಂಕದಂದು ವಿಜ್ಞಾನಿ 'ಬಿ' ಹುದ್ದೆಯ ಪ್ರವೇಶ ದರ್ಜೆಯಲ್ಲಿ 'ಡಿಆರ್‌ಡಿಒ'ದಲ್ಲಿ ಸೇವೆಗೆ ಸೇರಿದರು ಮತ್ತು ಎರಡು ವರ್ಷಗಳ ನಂತರ, ಅವರ ಪರಿವೀಕ್ಷಣೆಯನ್ನು ಸ್ಥಿರೀಕರಿಸಲಾಯಿತು. ಆದ್ದರಿಂದ ಪ್ರತಿವಾದಿಯ ಅರ್ಹತಾ ಸೇವೆಯು ದಿನಾಂಕ 12.09.1988ರಿಂದ ಅಂದರೆ, ಆಕೆಯು ಮೊದಲ ಬಾರಿಗೆ ನೇಮಕಗೊಂಡ ಮೂಲ ಹುದ್ದೆಯ ಅಧಿಕಾರವನ್ನು ವಹಿಸಿಕೊಂಡ ದಿನಾಂಕದಿಂದ ಪ್ರಾರಂಭವಾಗುತ್ತದೆ.

4.12 ಮೇಲಿನ ವಾದಗಳನ್ನು ಮಂಡಿಸುತ್ತಾ, ಪ್ರಸ್ತುತ ಅಪೀಲನ್ನು ವಜಾಗೊಳಿಸುವಂತೆ ಪ್ರಾರ್ಥಿಸಲಾಗಿದೆ.

5. ನಾವು ಆಯಾ ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದಗಳನ್ನು ಆಲಿಸಿರುತ್ತೇವೆ.

6. ಪ್ರಶ್ನಿತ ತೀರ್ಪು ಮತ್ತು ಆದೇಶದ ಮೂಲಕ, ಉಚ್ಚ ನ್ಯಾಯಾಲಯವು ಇಲ್ಲಿನ ಪ್ರತಿವಾದಿ ಸಲ್ಲಿಸಿರುವ ಅಪೀಲನ್ನು ಅಂಗೀಕರಿಸುತ್ತದೆ ಹಾಗೂ ಮೂಲ ಅರ್ಜಿಯನ್ನು ವಜಾಗೊಳಿಸಿ ಕೇಂದ್ರೀಯ ಆಡಳಿತದ ನ್ಯಾಯಾಧಿಕರಣ ಹೊರಡಿಸಿದ ತೀರ್ಪು ಮತ್ತು ಆದೇಶವನ್ನು ರದ್ದುಗೊಳಿಸಿರುತ್ತದೆ ಹಾಗೂ 'ಎನ್‌ಟಿಆರ್‌ಓ' ದಿನಾಂಕ 12.02.2019ರಂದು ಹೊರಡಿಸಿದ್ದ ಆದೇಶವನ್ನು ಮಾರ್ಪಡಿಸಿರುತ್ತದೆ ಹಾಗೂ ಅದನ್ನು ಕೇವಲ ಒಂದು ಬಿಡುಗಡೆಯ ಆದೇಶವೆಂದು ನಿರ್ಣಯಿಸಿ ಪರಿಗಣಿಸುವಂತೆ ನಿರ್ದೇಶಿಸಿರುತ್ತದೆ. ಪ್ರಶ್ನಿತ ತೀರ್ಪು ಮತ್ತು ಆದೇಶದ ಮೂಲಕ, ಉಚ್ಚ ನ್ಯಾಯಾಲಯವು ದಿನಾಂಕ 12.02.2019ರ ಆದೇಶದ ಅಡಿಯಲ್ಲಿ, ಮೂಲ ರಿಟ್ ಅರ್ಜಿದಾರ ಇಲ್ಲಿನ ಪ್ರತಿವಾದಿಯ ಸೇವೆಗಳು ಬಿಡುಗಡೆ ಹೊಂದತಕ್ಕದ್ದು ಹಾಗೂ ಆಕೆಯ ಪ್ರಯೋಜನಗಳನ್ನು ಲೆಕ್ಕಾಚಾರ ಮಾಡುವ ಸಂದರ್ಭದಲ್ಲಿ 'ಡಿಆರ್‌ಡಿಓ'ದಲ್ಲಿ ಸಲ್ಲಿಸಿದ್ದ ಹಿಂದಿನ ಸೇವೆಗಳ ಪ್ರಯೋಜನಗಳೂ ಸೇರಿದಂತೆ ಎಲ್ಲಾ ಆನುಷಂಗಿಕ ಪ್ರಯೋಜನಗಳಿಗೆ ಆಕೆಯು ಹಕ್ಕುದಾರಳಾಗಿರತಕ್ಕದ್ದು ಎಂದು ನಿರ್ದೇಶಿಸಿರುತ್ತದೆ. ಇಲ್ಲಿನ ಪ್ರತಿವಾದಿ–ಮೂಲ ರಿಟ್ ಅರ್ಜಿದಾರರು ಆಕೆ ವಿಜ್ಞಾನಿ 'ಎಚ್' ಹುದ್ದೆಯನ್ನು ಹೊಂದಿದ್ದರು ಮತ್ತು ಆ ಹುದ್ದೆಯಲ್ಲಿ ಪಡೆದ ಕೊನೆಯ ವೇತನವು ಆಕೆಯ ಎಲ್ಲಾ ಪ್ರಯೋಜನಗಳನ್ನು ಇತ್ಯರ್ಥಪಡಿಸುವ ಮಾನದಂಡವಾಗಿರುತ್ತದೆ ಎಂಬ ಹಿನ್ನೆಲೆಯಲ್ಲಿ ಆಕೆಗೆ ಅನುಮತಿಸಬಹುದಾದ ಎಲ್ಲಾ ಪ್ರಯೋಜನಗಳಿಗೆ ಹಕ್ಕುಳ್ಳವರಾಗಿರುತ್ತಾರೆ ಎಂದು ಉಚ್ಚ ನ್ಯಾಯಾಲಯವು ಸ್ಪಷ್ಟಪಡಿಸಿರುತ್ತದೆ.

6.1 ‘ಎನ್‌ಟಿಆರ್‌ಒ’ದ ಸೂಚನೆಯ ಮೇರೆಗೆ ಮೇಲೆ ತಿಳಿಸಿರುವ ನಿರ್ದೇಶನಗಳಿಗೆ ಎದುರಾಗಿರುವ ಸವಾಲನ್ನು ಪರಿಗಣಿಸುವಾಗ, ಕೆಲವು ಸ್ಪಷ್ಟವಾಗಿ ಎದ್ದು ಕಾಣುವ ದಿನಾಂಕಗಳು ಮತ್ತು ಘಟನೆಗಳನ್ನು ಗಮನಿಸಬೇಕಾಗುತ್ತದೆ, ಅವು ಈ ಕೆಳಗಿನಂತಿವೆ.

(i) ಇಲ್ಲಿನ ಪ್ರತಿವಾದಿ–ಮೂಲ ರಿಟ್ ಅರ್ಜಿದಾರರು ‘ಡಿಆರ್‌ಡಿಒ’ದಲ್ಲಿ ವಿಜ್ಞಾನಿ ‘ಜಿ’ ಆಗಿ ಸೇವೆ ಸಲ್ಲಿಸುತ್ತಿದ್ದರು. ‘ಎನ್‌ಟಿಆರ್‌ಒ’ವು ವಿಜ್ಞಾನಿ ‘ಎಚ್’ ಹುದ್ದೆಗೆ ನೇರ ನೇಮಕಾತಿಯ ಆಧಾರದಲ್ಲಿ ಅರ್ಜಿಗಳನ್ನು ಆಹ್ವಾನಿಸಿತ್ತು. ಪ್ರತಿವಾದಿ–ಮೂಲ ರಿಟ್ ಅರ್ಜಿದಾರರು ಸದರಿ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು ಮತ್ತು ದಿನಾಂಕ 10.05.2018ರಂದು ‘ಎಸಿಸಿ’ ಸಮಿತಿಯ ಅನುಮೋದನೆಯ ನಂತರ ‘ಎನ್‌ಟಿಆರ್‌ಒ’ದಲ್ಲಿ ವಿಜ್ಞಾನಿ ‘ಎಚ್’ ಆಗಿ ನೇಮಕಗೊಂಡಿದ್ದರು. ಮೂಲ ರಿಟ್ ಅರ್ಜಿದಾರರಿಗೆ ದಿನಾಂಕ 11.05.2018ರಂದು ಒಂದು ವರ್ಷದ ಪರಿವೀಕ್ಷಣಾವಧಿ ಸೇರಿದಂತೆ ನಿಬಂಧನೆಗಳು ಹಾಗೂ ಷರತ್ತುಗಳನ್ನು ನಿಗದಿಪಡಿಸಿ ನೇಮಕಾತಿಗೆ ಸಂಬಂಧಿಸಿದ ದಾಖಲೆಯನ್ನು (ಆಫರ್) ನೀಡಲಾಯಿತು.

(ii) ಪ್ರತಿವಾದಿ-ಮೂಲ ರಿಟ್ ಅರ್ಜಿದಾರರು ಮತ್ತೊಂದು ಸರ್ಕಾರಿ ಸಂಸ್ಥೆಯಲ್ಲಿ ನೇಮಕಗೊಂಡಿದ್ದರಿಂದ, ಆಕೆ ತಾಂತ್ರಿಕ ರಾಜೀನಾಮೆಯನ್ನು ಸಲ್ಲಿಸುವುದು ಅಗತ್ಯವಾಗಿತ್ತು ಹಾಗೂ ಆಕೆ ‘ಡಿಆರ್‌ಡಿಒ’ದ ವಿಜ್ಞಾನಿ ‘ಜಿ’ ಹುದ್ದೆಗೆ ತಾಂತ್ರಿಕ ರಾಜೀನಾಮೆಯನ್ನು ಸಲ್ಲಿಸುವ ಮೂಲಕ ಅದನ್ನು ಸಲ್ಲಿಸಿದರು ಹಾಗೂ ಇದು ದಿನಾಂಕ 22.06.2018ರಂದು ಅಂಗೀಕರಿಸಲ್ಪಟ್ಟಿತು ಮತ್ತು ‘ಎನ್‌ಟಿಆರ್‌ಒ’ದಲ್ಲಿ ಹೊಸ ನೇಮಕಾತಿಯನ್ನು ಪಡೆದುಕೊಳ್ಳಲು ‘ಡಿಆರ್‌ಡಿಒ’ ಆಕೆಯನ್ನು ಬಿಡುಗಡೆಗೊಳಿಸಿತು. ಅದಾಗ್ಯೂ, ತಾಂತ್ರಿಕ ರಾಜೀನಾಮೆಯನ್ನು

ಸಲ್ಲಿಸಿದ ಬಳಿಕ 'ಡಿಆರ್‌ಡಿಒ'ದಲ್ಲಿ ವಿಜ್ಞಾನಿ 'ಜಿ' ಹುದ್ದೆಯ ಮೇಲೆ ಪ್ರತಿವಾದಿಯ ಧಾರಣಾಧಿಕಾರವು ಸಂಬಂಧಿತ ಒ.ಎಂ.ನ ಪ್ರಕಾರ ಮುಂದುವರೆಯಿತು.

(iii) ಈ ಹಂತದಲ್ಲಿ, ಅವನು/ಅವಳು ಇನ್ನೊಂದು ಕೇಂದ್ರ/ರಾಜ್ಯ ಸರ್ಕಾರದ ಸಂಸ್ಥೆಯಲ್ಲಿ ಪರಿವೀಕ್ಷಣೆಯ ಆಧಾರದಲ್ಲಿ ನೇಮಕಗೊಂಡ ಹಿನ್ನೆಲೆಯಲ್ಲಿ, ಒಂದು ವೇಳೆ ಆಕೆಯನ್ನು ಖಾಯಂಗೊಳಿಸದಿದ್ದರೆ ಮತ್ತು/ಅಥವಾ ಪರಿವೀಕ್ಷಣಾ ಅವಧಿಯಲ್ಲಿ ಆಕೆಯನ್ನು ಸೇವೆಯಿಂದ ಬಿಡುಗಡೆಗೊಳಿಸಿದ್ದರೆ, ಆಕೆ ಕೆಲಸವನ್ನು ಕಳೆದುಕೊಳ್ಳಬೇಕಾಗಿಲ್ಲ ಮತ್ತು ಆಕೆ ತನ್ನ ಹಿಂದಿನ ಸಂಸ್ಥೆಯಲ್ಲಿ ಕರ್ತವ್ಯಕ್ಕೆ ವಾಪಸಾಗಿ ಸೇರಬಹುದಾಗಿದೆ ಎಂಬ ಕಾರಣದಿಂದಾಗಿ ಅವನು/ಅವಳು ಕೆಲಸ ಮಾಡುತ್ತಿದ್ದ ಹುದ್ದೆಗೆ ತಾಂತ್ರಿಕ ರಾಜೀನಾಮೆಯನ್ನು ಸಲ್ಲಿಸುವುದು ಹಾಗೂ ಹೊಸ ಸಂಸ್ಥೆಯಲ್ಲಿ ಅವರ ಪರಿವೀಕ್ಷಣಾ ಅವಧಿ ತೃಪ್ತಿಕರವಾಗಿ ಪೂರ್ಣಗೊಳ್ಳುವವರೆಗೆ ಮತ್ತು/ಅಥವಾ ಅವನು/ಅವಳು ಹೊಸ ಸಂಸ್ಥೆಯಲ್ಲಿ ಖಾಯಂ ಆಗಿ ನೇಮಕಗೊಳ್ಳುವವರೆಗೆ ಧಾರಣಾಧಿಕಾರವನ್ನು ಮುಂದುವರೆಸುವುದು ಎಂಬ ಅಂಶಗಳು ಉದ್ಯೋಗಿಯ ಹಿತದೃಷ್ಟಿಯಲ್ಲಿವೆ ಹಾಗೂ ಸಂಬಂಧಿಸಿದ ಉದ್ಯೋಗಿಯ ಪ್ರಯೋಜನಕ್ಕಾಗಿ ಮಾಡಲಾಗಿವೆ ಎಂದು ಹೇಳಬಹುದಾಗಿದೆ. ಈ ಪರಿಸ್ಥಿತಿಯಲ್ಲಿ, 'ಎನ್‌ಟಿಆರ್‌ಒ'ದಲ್ಲಿ ವಿಜ್ಞಾನಿ 'ಎಚ್' ಆಗಿ ಪರಿವೀಕ್ಷಣೆಯ ಆಧಾರದಲ್ಲಿ ನೇಮಕಗೊಂಡ ನಂತರ 'ಡಿಆರ್‌ಡಿಒ'ದ ವಿಜ್ಞಾನಿ 'ಜಿ' ಹುದ್ದೆಗೆ ತಾಂತ್ರಿಕ ರಾಜೀನಾಮೆಯನ್ನು ಸಲ್ಲಿಸಿದ ನಂತರ, ಆಕೆಯು 'ಡಿಆರ್‌ಡಿಒ'ದಲ್ಲಿ ಹೊಂದಿದ್ದ ವಿಜ್ಞಾನಿ 'ಜಿ' ಹುದ್ದೆಯ ಧಾರಣಾಧಿಕಾರ ಮುಂದುವರೆದಿರುತ್ತದೆ.

(iv) ಪರಿವೀಕ್ಷಣಾ ಅವಧಿಯಲ್ಲಿ, ಆಕೆಯ ಕೆಲಸ ತೃಪ್ತಿಕರವಾಗಿಲ್ಲ ಎಂದು ಕಂಡುಬಂದಿದ್ದು, 'ಎಸಿಸಿ'ಯು ಆಕೆಯನ್ನು 'ಎನ್‌ಟಿಆರ್‌ಒ'ದಲ್ಲಿ ಮುಂದುವರೆಸದಿರಲು ಮತ್ತು 'ಎನ್‌ಟಿಆರ್‌ಒ'ದಲ್ಲಿ ವಿಜ್ಞಾನಿ 'ಎಚ್' ಆಗಿ ಆಕೆಯನ್ನು ಬಿಡುಗಡೆ ಮಾಡಲು ಮತ್ತು ವಿಜ್ಞಾನಿ

‘ಜಿ’ ಹುದ್ದೆಯ ಮೇಲೆ ಆಕೆಗೆ ಇದ್ದ ಧಾರಣಾಧಿಕಾರವು ಈ ಮೇಲೆ ಗಮನಿಸಿದಂತೆ ಮುಂದುವರೆದಿದ್ದರಿಂದ ಅವರ ಮಾತೃ ಇಲಾಖೆ ಆಗಿದ್ದ ‘ಡಿಆರ್‌ಡಿಒ’ಗೆ ವಿಜ್ಞಾನಿ ‘ಜಿ’ ಹುದ್ದೆಗೆ ಮರಳಿಸಲು ಪ್ರಜ್ಞಾಪೂರ್ವಕ ನಿರ್ಧಾರವನ್ನು ತೆಗೆದುಕೊಂಡಿತು. ಪ್ರತಿವಾದಿ–ಮೂಲ ರಿಟ್ ಅರ್ಜಿದಾರರನ್ನು ‘ಎನ್‌ಟಿಆರ್‌ಒ’ದ ವಿಜ್ಞಾನಿ ‘ಎಚ್’ (ಪರಿವೀಕ್ಷಣೆ) ಹುದ್ದೆಯಿಂದ ಆಕೆಯ ಮೂಲ ಕೇಡರ್–‘ಡಿಆರ್‌ಡಿಒ’ಗೆ ಅವಧಿಪೂರ್ವ ವಾಪಸಾತಿಗೆ ‘ಎಸಿಸಿ’ಯ ಅನುಮೋದನೆ ಪಡೆದ ನಂತರ ದಿನಾಂಕ 12.02.2019ರಂದು ‘ಎನ್‌ಟಿಆರ್‌ಒ’ದಿಂದ ಬಿಡುಗಡೆ ಮಾಡಲಾಯಿತು. ವಾಸ್ತವವಾಗಿ, ತದನಂತರ ಪ್ರತಿವಾದಿಯು ‘ಸಿಎಐಆರ್’, ‘ಡಿಆರ್‌ಡಿಒ’ದಲ್ಲಿ ದಿನಾಂಕ 13.02.2019ರಂದೇ ಕರ್ತವ್ಯಕ್ಕೆ ವರದಿ ಮಾಡಿಕೊಂಡರು. ಅದಾಗ್ಯೂ, ಏಕಕಾಲದಲ್ಲಿ, ‘ಡಿಆರ್‌ಡಿಒ’ದಲ್ಲಿ ಸೂಕ್ತವಾದ ಹುದ್ದೆಯಲ್ಲಿ ತಮ್ಮನ್ನು ನೇಮಿಸುವಂತೆ ಅವರು ವಿನಂತಿಸಿದ್ದರು. ಯಾವುದೇ ಆದೇಶವನ್ನು ಹೊರಡಿಸಲಾಗಲಿಲ್ಲ ಮತ್ತು ದಿನಾಂಕ 13.02.2019ರಂದು ಹಾಗೂ ಆ ಬಳಿಕ ‘ಡಿಆರ್‌ಡಿಒ’ದ ಉದ್ಯೋಗಿಯಾಗಿ ಮುಂದುವರೆದರು. ತದನಂತರ ಆಕೆಯು ‘ಡಿಆರ್‌ಡಿಒ’ದಲ್ಲಿ ವಿಜ್ಞಾನಿ ‘ಜಿ’ ಆಗಿ ಮೂರು ತಿಂಗಳ ರಜೆ ತೆಗೆದುಕೊಂಡರು. ಆದ್ದರಿಂದ, ಆಕೆ ಒಮ್ಮೆ ‘ಸಿಎಐಆರ್’, ‘ಡಿಆರ್‌ಡಿಒ’ದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ಮೇಲೆ ಮತ್ತು ‘ಸಿಎಐಆರ್’, ‘ಡಿಆರ್‌ಡಿಒ’ದಲ್ಲಿ ಆಕೆಯು ಹಿಂದೆ ಹೊಂದಿದ್ದ ಹುದ್ದೆಯಲ್ಲಿ ಎಂದರೆ, ಆಕೆಯು ಈ ಹಿಂದೆ ತಾಂತ್ರಿಕ ರಾಜೀನಾಮೆ ಸಲ್ಲಿಸುವ ಮೂಲಕ ‘ಡಿಆರ್‌ಡಿಒ’ದಲ್ಲಿ ಧಾರಣಾಧಿಕಾರ ಮುಂದುವರೆದಿದ್ದ ವಿಜ್ಞಾನಿ ‘ಜಿ’ ಹುದ್ದೆಯಲ್ಲಿದ್ದುಕೊಂಡು ಮೂರು ತಿಂಗಳ ರಜೆ ತೆಗೆದುಕೊಂಡ ಮೇಲೆ, ಆಕೆ ‘ಎನ್‌ಟಿಆರ್‌ಒ’ದ ಉದ್ಯೋಗಿಯಾಗಿರುವುದು, ಅದರಲ್ಲೂ ‘ಎನ್‌ಟಿಆರ್‌ಒ’ದಲ್ಲಿ ವಿಜ್ಞಾನಿ ‘ಎಚ್’ ಆಗಿರುವುದು ಕೊನೆಗೊಂಡಿತು.

(v) ಈ ಹಂತದಲ್ಲಿ, ಆ ಬಳಿಕವೂ ಸಹ, ಪ್ರತಿವಾದಿಯು 'ಎನ್‌ಟಿಆರ್‌ಒ'ಗೆ ತನ್ನನ್ನು ಮರು ನಿಯುಕ್ತಿಗೊಳಿಸುವಂತೆ ಹಾಗೂ ದಿನಾಂಕ 19.03.2019ರ ತನ್ನ ಅರ್ಜಿಯನ್ನು ಸ್ವಯಿಚ್ಛಾ ನಿವೃತ್ತಿಗೆ ತಾನು ನೀಡಿರುವ ಮೂರು ತಿಂಗಳಿನ ನೋಟಿಸ್ ಅವಧಿಯಾಗಿ ಪರಿಗಣಿಸುವಂತೆ ಕೋರಿದ್ದರು ಎಂಬುದನ್ನು ಗಮನಿಸುವುದು ಅಗತ್ಯವಾಗುತ್ತದೆ. ಆದ್ದರಿಂದ 'ಎನ್‌ಟಿಆರ್‌ಒ'ದಲ್ಲೇ ತನ್ನನ್ನು ಮರು ನಿಯುಕ್ತಿಗೊಳಿಸುವಂತೆ ಆಕೆ ಕೋರಿರುವುದು ಪ್ರತಿವಾದಿ–ಮೂಲ ರಿಟ್ ಅರ್ಜಿದಾರಳು 'ಎನ್‌ಟಿಆರ್‌ಒ'ದ ಹುದ್ದೆಯಿಂದ ಬಿಡುಗಡೆಗೊಂಡಿರುವುದನ್ನು ಸೂಚಿಸುತ್ತದೆ, ಏಕೆಂದರೆ ಅಂತಹ ಸಂದರ್ಭದಲ್ಲಿ ಮಾತ್ರ ಮರು ನಿಯುಕ್ತಿಯ ಪ್ರಶ್ನೆ ಉದ್ಭವಿಸಬಹುದಾಗಿದೆ.

(vi) ತದನಂತರ, ಪ್ರತಿವಾದಿ–ಮೂಲ ರಿಟ್ ಅರ್ಜಿದಾರರು ವಿಜ್ಞಾನಿ 'ಎಚ್' ಆಗಿ ನೇಮಿಸುವಂತೆ/ನಿಯೋಜಿಸುವಂತೆ ಒತ್ತಾಯಿಸಿದರು. 'ನೇಮಕಾತಿ ಮೌಲ್ಯಮಾಪನ ಕೇಂದ್ರ'ವು ಆಕೆಯನ್ನು ವಿಜ್ಞಾನಿ 'ಎಚ್' ಹುದ್ದೆಗೆ ಪದೋನ್ನತಿಗಾಗಿ ಪರಿಗಣಿಸಿತು. ಆಕೆಯು ವಿಜ್ಞಾನಿ 'ಎಚ್' ಹುದ್ದೆಗೆ ಪದೋನ್ನತಿಗಾಗಿ 'ನೇಮಕಾತಿ ಮೌಲ್ಯಮಾಪನ ಕೇಂದ್ರ'ದ ನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸಿದರು. ಆಕೆಯು ತಮ್ಮ ವೈಯಕ್ತಿಕ ಮಾಹಿತಿಯನ್ನು ಕಳುಹಿಸಿದರು. ಆಕೆಯು ಹೈದರಾಬಾದ್‌ನಲ್ಲಿ ನಡೆದ ಕಾರ್ಯಕ್ಷಮತೆಯ ಮೌಲ್ಯಮಾಪನಕ್ಕೆ ವರದಿ ಮಾಡಿಕೊಂಡರು. ತದನಂತರ, ಆಕೆಯು 'ಡಿಆರ್‌ಡಿಒ'ದ ವಿಜ್ಞಾನಿ 'ಎಚ್' ಹುದ್ದೆಗೆ ಪದೋನ್ನತಿ ಪಡೆಯಲು ಅರ್ಹರಲ್ಲ ಎಂದು ಕಂಡುಬಂದಿತು. ತಮ್ಮ ವೈಯಕ್ತಿಕ ಮಾಹಿತಿಯಲ್ಲಿ ಆಕೆಯು ನಿರ್ದಿಷ್ಟವಾಗಿ ತಾನು ವಿಜ್ಞಾನಿ 'ಜಿ' ಆಗಿ ಕಾರ್ಯ ನಿರ್ವಹಿಸುತ್ತಿರುವುದಾಗಿ ಹೇಳಿದ್ದಾರೆ. ಪ್ರತಿವಾದಿಯು ತನ್ನ ವೈಯಕ್ತಿಕ ಮಾಹಿತಿಯನ್ನು ಸಲ್ಲಿಸುವುದಕ್ಕೆ ಒತ್ತಾಯಿಸಲ್ಪಟ್ಟಿದ್ದಳು ಹಾಗೂ/ಅಥವಾ ವಿಜ್ಞಾನಿ 'ಎಚ್' ಹುದ್ದೆಗೆ

ಪದೋನ್ನತಿಗಾಗಿ ಪರಾಮರ್ಶೆಯ ಮೌಲ್ಯಮಾಪನಕ್ಕೆ ಹಾಜರಾಗಲು ಒತ್ತಾಯಿಸಲ್ಪಟ್ಟಿದ್ದಳು ಎಂಬ ಪ್ರತಿವಾದಿಯ ಪರವಾಗಿ ಮಂಡಿಸಿರುವ ವಾದವನ್ನು ಅಂಗೀಕರಿಸಲು ಸಾಧ್ಯವಿಲ್ಲ. ಆಕೆ 'ಡಿಆರ್‌ಡಿಒ'ದಲ್ಲಿ ವಿಜ್ಞಾನಿ 'ಎಚ್' ಹುದ್ದೆಗೆ ಪದೋನ್ನತಿಗಾಗಿ ಸಂದರ್ಶನಕ್ಕೆ ಹಾಜರಾದ ಸಂದರ್ಭದಲ್ಲಿ ಅಂತಹ ಯಾವುದೇ ಸಂಕಷ್ಟಗಳನ್ನು ಮುಂದಿಟ್ಟಿರಲಿಲ್ಲ. ಆಕೆಯು ದಿನಾಂಕ 13.02.2019ರಿಂದ 28.06.2019ರವರೆಗೆ ವಿಜ್ಞಾನಿ 'ಜಿ' ಆಗಿ ರಜೆ/ ಗಳಿಕೆ ರಜೆಗೆ ಅರ್ಜಿ ಸಲ್ಲಿಸಿದರು ಹಾಗೂ ಅದರ ತರುವಾಯದಲ್ಲಿಯೂ, ಆಕೆ ನಲವತ್ತು ದಿನಗಳ ರಜೆ ವಿಸ್ತರಣೆಗೆ ಅರ್ಜಿ ಸಲ್ಲಿಸಿದರು.

6.2 ಮೇಲೆ ಹೇಳಿರುವ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಪರಿಗಣಿಸಿದರೆ, ಪ್ರತಿವಾದಿಯು ದಿನಾಂಕ 13.02.2019ರಂದು ಮತ್ತು ಅಲ್ಲಿಂದ ಮುಂದೆ 'ಡಿಆರ್‌ಡಿಒ'ದ ಉದ್ಯೋಗಿ ಆಗಿದ್ದಾರೆ ಎಂದು ಹೇಳಬಹುದು ಮತ್ತು ಯಾವುದೇ ಸಂದರ್ಭದಲ್ಲಿ ಆಕೆ 'ಎನ್‌ಟಿಆರ್‌ಒ'ದಲ್ಲಿ ಮುಂದುವರೆದಿದ್ದಾರೆ ಎಂದು ಹೇಳುವಂತಿಲ್ಲ ಮತ್ತು/ಅಥವಾ ದಿನಾಂಕ 13.02.2019ರಂದು ಮತ್ತು ಅಲ್ಲಿಂದ ಮುಂದೆ 'ಎನ್‌ಟಿಆರ್‌ಒ'ದ ಉದ್ಯೋಗಿ ಎಂದು ಆಕೆಯನ್ನು ಪರಿಗಣಿಸಲು ಸಾಧ್ಯವಿಲ್ಲ ಎಂಬುದನ್ನು ಕಾಣಬಹುದಾಗಿದೆ. ವಿಷಯವನ್ನು ಆ ದೃಷ್ಟಿಯಿಂದ ಗಮನಿಸಿದಾಗ, ಮೇಲೆ ಹೇಳಿರುವಂತೆ, ಅದರಲ್ಲಿಯೂ ನಿರ್ದಿಷ್ಟವಾಗಿ ದಿನಾಂಕ 12.02.2019ರ ಸಂವಹನವನ್ನು ಕೇವಲ ಒಂದು ಬಿಡುಗಡೆಯ ಆದೇಶವಾಗಿ ಪರಿಗಣಿಸುವಂತೆ ನಿರ್ದೇಶನಗಳನ್ನು ನೀಡುವಲ್ಲಿ ಉಚ್ಚ ನ್ಯಾಯಾಲಯವು ಒಂದು ಗಂಭೀರ ಪ್ರಮಾದವನ್ನು ಎಸಗಿದೆ. ಮೂಲ ರಿಟ್ ಅರ್ಜಿದಾರರು-ಇಲ್ಲಿನ ಪ್ರತಿವಾದಿಯ ಸೇವೆಗಳು ಬಿಡುಗಡೆ ಹೊಂದತಕ್ಕದ್ದು ಹಾಗೂ ಸೇವಾಂತ್ಯದ ಪ್ರಯೋಜನಗಳನ್ನು ಲೆಕ್ಕ ಹಾಕುವ ಸಂದರ್ಭದಲ್ಲಿ ಆಕೆಯು 'ಡಿಆರ್‌ಡಿಒ'ದಲ್ಲಿ ಸಲ್ಲಿಸಿರುವ ಹಿಂದಿನ ಸೇವೆಗಳ ಪ್ರಯೋಜನವೂ ಸೇರಿದಂತೆ ಆಕೆಯು ಎಲ್ಲಾ ಆನುಷಂಗಿಕ ಪ್ರಯೋಜನಗಳಿಗೆ ಹಕ್ಕುಳ್ಳವಳಾಗಿರತಕ್ಕದ್ದು ಎಂದು ದಿನಾಂಕ 12.02.2019ರ ಆದೇಶದಡಿಯಲ್ಲಿ ಆದೇಶಿಸುವಲ್ಲಿಯೂ ಸಹ ಉಚ್ಚ ನ್ಯಾಯಾಲಯವು ಗಂಭೀರ ಪ್ರಮಾದವನ್ನು

ಎಸಗಿರುತ್ತದೆ. 'ಎನ್‌ಟಿಆರ್‌ಒ'ದಿಂದ ಪಾವತಿಸುವಂತೆ ನಿರ್ದೇಶಿಸಲಾಗಿರುವ ಆಕೆಯ ಸೇವಾಂತ್ಯದ ಪ್ರಯೋಜನಗಳನ್ನು ಲೆಕ್ಕ ಹಾಕುವ ಸಂದರ್ಭದಲ್ಲಿ ಆಕೆ 'ಡಿಆರ್‌ಡಿಒ'ದಲ್ಲಿ ಸಲ್ಲಿಸಿರುವ ಹಿಂದಿನ ಸೇವೆಗಳ ಪ್ರಯೋಜನವೂ ಸೇರಿದಂತೆ ಎಲ್ಲಾ ಆನುಷಂಗಿಕ ಪ್ರಯೋಜನಗಳಿಗೆ ಹಕ್ಕುಳ್ಳವಳಾಗಿರತಕ್ಕದ್ದು ಎಂದು ಉಚ್ಚ ನ್ಯಾಯಾಲಯವು ಯಾವ ಉಪಬಂಧದ ಅಡಿಯಲ್ಲಿ ನಿರ್ದೇಶನ ನೀಡಿದೆ ಎಂಬುದನ್ನು ತಿಳಿಯುವಲ್ಲಿ ನಾವು ವಿಫಲರಾಗಿದ್ದೇವೆ. ಉಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನಗಳು ಸ್ವಯಂ–ವಿರುದ್ಧಾತ್ಮಕವಾಗಿವೆ.

6.3 ಅದಲ್ಲದೆಯೂ ಸಹ, ಮೂಲ ರಿಟ್ ಅರ್ಜಿದಾರರು–ಇಲ್ಲಿನ ಪ್ರತಿವಾದಿಯು ವಿಜ್ಞಾನಿ 'ಎಚ್' ಹುದ್ದೆಯನ್ನು ಹೊಂದಿದ್ದಾರೆ ಮತ್ತು ಆ ಹುದ್ದೆಯಲ್ಲಿ ಆಕೆಯು ಪಡೆದ ಕೊನೆಯ ವೇತನವು ಆಕೆಯ ಎಲ್ಲಾ ಪ್ರಯೋಜನಗಳನ್ನು ಇತ್ಯರ್ಥಪಡಿಸುವ ಮಾನದಂಡವಾಗಿದೆ ಎಂಬ ಹಿನ್ನೆಲೆಯಲ್ಲಿ ಅನುಮತಿಸಬಹುದಾದ ಅಂತಹ ಎಲ್ಲ ಪ್ರಯೋಜನಗಳಿಗೆ ಹಕ್ಕುಳ್ಳವಳಾಗಿರತಕ್ಕದ್ದು ಎಂದು ಗಮನಿಸುವಲ್ಲಿ ಉಚ್ಚ ನ್ಯಾಯಾಲಯವು ಗಂಭೀರ ಪ್ರಮಾದವನ್ನು ಎಸಗಿದೆ. ಒಮ್ಮೆ ಆಕೆಯನ್ನು 'ಎನ್‌ಟಿಆರ್‌ಒ'ದಿಂದ ಮುಕ್ತಗೊಳಿಸಿದ ನಂತರ ಮತ್ತು ಮೇಲೆ ಹೇಳಿದಂತೆ ಆಕೆಯು 'ಡಿಆರ್‌ಡಿಒ'ದಲ್ಲಿ ವಿಜ್ಞಾನಿ 'ಜಿ' ಆಗಿ ಕರ್ತವ್ಯಕ್ಕೆ ವರದಿಮಾಡಿಕೊಂಡ ನಂತರ ಆಕೆಯು ತಾನು 'ಎನ್‌ಟಿಆರ್‌ಒ'ದಲ್ಲಿ ವಿಜ್ಞಾನಿ 'ಎಚ್' ಆಗಿ ಕಾರ್ಯ ನಿರ್ವಹಿಸುವುದನ್ನು ಮುಂದುವರಿಸಿದ್ದೇನೆಂದು ಸಾಧಿಸಲು ಅವಕಾಶ ನೀಡಲಾಗುವುದಿಲ್ಲ.

6.4 ಅದಲ್ಲದೆಯೂ ಸಹ, ಪ್ರತಿವಾದಿಯನ್ನು 'ಎನ್‌ಟಿಆರ್‌ಒ'ದಲ್ಲಿ ವಿಜ್ಞಾನಿ 'ಎಚ್' ಆಗಿ ನೇರ ನೇಮಕಾತಿಯ ಮೇರೆಗೆ ಪರಿವೀಕ್ಷಣೆಯ ಮೇಲೆ ನೇಮಕ ಮಾಡಲಾಗಿತ್ತು ಮತ್ತು ಆಕೆಯ ಪರಿವೀಕ್ಷಣಾ ಅವಧಿಯು ಪೂರ್ಣಗೊಂಡಿರಲಿಲ್ಲ ಎಂಬುದನ್ನು ಗಮನಿಸಬೇಕು. ಆಕೆಯ ಪರಿವೀಕ್ಷಣಾ ಅವಧಿ ಪೂರ್ಣಗೊಳ್ಳುವ/ಮುಕ್ತಾಯಗೊಳ್ಳುವ ಮೊದಲು, ಆಕೆಯನ್ನು ಹುದ್ದೆಯಿಂದ ಬಿಡುಗಡೆಗೊಳಿಸಲಾಗಿತ್ತು.

ಆದ್ದರಿಂದ, ಸಿಸಿಎಸ್ (ಪಿಂಚಣಿ) ನಿಯಮಗಳು, 1972ರ ಪ್ರಕಾರವೂ ಸಹ ಆಕೆಗೆ 'ಎನ್‌ಟಿಆರ್‌ಒ'ದಲ್ಲಿ ವಿಜ್ಞಾನಿ 'ಎಚ್' ಆಗಿ ಪಿಂಚಣಿ ಪ್ರಯೋಜನಗಳು/ಸೇವಾಂತ್ಯದ ಪ್ರಯೋಜನಗಳನ್ನು ನೀಡಲು ಸಾಧ್ಯವಾಗುತ್ತಿರಲಿಲ್ಲ.

7. ಮೇಲ್ಕಂಡ ವಿಷಯಗಳ ಹಿನ್ನೆಲೆಯಲ್ಲಿ ಹಾಗೂ ಮೇಲೆ ತಿಳಿಸಿದ ಕಾರಣಗಳಿಗಾಗಿ, ಉಚ್ಚ ನ್ಯಾಯಾಲಯವು ನೀಡಿರುವ ಪ್ರಶ್ನಿತ ತೀರ್ಪು ಮತ್ತು ಆದೇಶವು ಅಸಮರ್ಥನೀಯವಾಗಿದೆ, ಹಾಗೂ ಅದು ರದ್ದುಗೊಳಿಸಿ ವಜಾಗೊಳಿಸಲು ಯೋಗ್ಯವಾಗಿದೆ, ಹಾಗೂ ಅದಕ್ಕನುಸಾರವಾಗಿ ಅದನ್ನು ರದ್ದುಗೊಳಿಸಿ ವಜಾಗೊಳಿಸಲಾಗಿದೆ, ಹಾಗೂ 'ಸಿಎಟಿ' ಹೊರಡಿಸಿದ್ದ ತೀರ್ಪು ಹಾಗೂ ಆದೇಶವನ್ನು ಮರು ಸ್ಥಾಪಿಸಲಾಗಿದೆ. ಅದಾಗ್ಯೂ, ಸಂಪೂರ್ಣ ನ್ಯಾಯವನ್ನು ಒದಗಿಸುವುದಕ್ಕಾಗಿ, ಮೂಲ ರಿಟ್ ಅರ್ಜಿದಾರರು–ಇಲ್ಲಿನ ಪ್ರತಿವಾದಿಯು ಬಯಸಿದರೆ, ಆಕೆಯು ತನ್ನ ಸ್ವಯಿಚ್ಛಾ ನಿವೃತ್ತಿ ಅರ್ಜಿಯನ್ನು ಸ್ವೀಕರಿಸುವಂತೆ ಪ್ರಾರ್ಥಿಸಲು ಒತ್ತಾಯಿಸಬಹುದು, ಹಾಗೂ ಅದನ್ನು 'ಡಿಆರ್‌ಡಿಒ' ಪರಿಗಣಿಸಬಹುದು ಎಂದು ನಾವು ನಿರ್ದೇಶಿಸುತ್ತೇವೆ. ಆಕೆ ಒಂದೊಮ್ಮೆ ತನ್ನನ್ನು ಸ್ವಯಿಚ್ಛಾ ನಿವೃತ್ತಿಗೊಳಿಸಲು ಸ್ವಯಿಚ್ಛಾ ನಿವೃತ್ತಿ ಅರ್ಜಿಯನ್ನು ಸಲ್ಲಿಸಿದಲ್ಲಿ, ಅದನ್ನು ಧನಾತ್ಮಕವಾಗಿ ಪರಿಗಣಿಸಬಹುದಾಗಿದೆ. ಅದಾಗ್ಯೂ, ಪ್ರತಿವಾದಿಗೆ ಆಕೆಯ ಸ್ವಯಿಚ್ಛಾ ಸೇವಾ ನಿವೃತ್ತಿಯ ಅರ್ಜಿಯನ್ನು ಸ್ವೀಕರಿಸಿದಾಗ ಲಭ್ಯಗೊಳ್ಳಬಹುದಾದ ಎಲ್ಲಾ ಪ್ರಯೋಜನಗಳು ದೊರೆಯುವಂತೆ 'ಡಿಆರ್‌ಡಿಒ' ವಿಜ್ಞಾನಿ 'ಜಿ' ಹುದ್ದೆಗೆ ಅದನ್ನು ಅನ್ವಯಿಸಬಹುದು, ಏಕೆಂದರೆ ಅದಲ್ಲದೆಯೂ ಸಹ, ಮೇಲೆ ಗಮನಿಸಿರುವಂತೆ ಆಕೆ 'ಡಿಆರ್‌ಡಿಒ'ದಲ್ಲಿ ವಿಜ್ಞಾನಿ 'ಜಿ' ಹುದ್ದೆಯ ಮೇಲೆ ಧಾರಣಾಧಿಕಾರವನ್ನು ಹೊಂದಿರುವುದನ್ನು ಮುಂದುವರೆಸಿರುತ್ತಾರೆ.

ಹೀಗೆ ಗಮನಿಸುತ್ತಾ, ಪ್ರಸ್ತುತ ಅಪೀಲನ್ನು ಪುರಸ್ಕರಿಸಲಾಗಿದೆ. ಅದಾಗ್ಯೂ, ಮೊಕದ್ದಮೆಯ ಸಂಗತಿಗಳು ಹಾಗೂ ಸನ್ನಿವೇಶಗಳಲ್ಲಿ ವೆಚ್ಚದ ಆದೇಶ ಇರುವುದಿಲ್ಲ.

……………………………………ನ್ಯಾ.
(ಎಂ.ಆರ್. ಶಾಹ್)

ನವದೆಹಲಿ
ಫೆಬ್ರವರಿ 17, 2023

……………………………………ನ್ಯಾ.
(ಹಿಮಾ ಕೊಹ್ಲಿ)

## <u>ಕ್ಲೇಮು ನಿರಾಕರಣೆ</u>

**“**ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರು ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವುದಕ್ಕಾಗಿ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು.**”**